ಅಧ್ಯಕ್ಷರು : ಇಲ್ಲಿಯವರೆಗೆ ನನಗೆ ಆ ರೀತಿಯ ಸುದ್ದಿಗಳು ಅಥವಾ ಪತ್ರಗಳು ಬಂದಿಲ್ಲ. ಆದ್ದರಿಂದ ಆ ವಿಚಾರವನ್ನು ಇಲ್ಲಿಗೆ ಬಿಟ್ಟು ಮುಂದಿನ ವಿಷಯವನ್ನು ತೆಗೆದುಕೊಳ್ಳುವುದು ಒಳ್ಳೆಯದು.

ಪ್ರಕಟಣೆ

ಅಧ್ಯಕ್ಷರು : ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ದಿನಾಂಕ 23ನೇ ಮಾರ್ಚ್ 2000 ದಂದು ವಿಧಾನಪರಿಷತ್ತಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ 2000ವನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿತೆಂದು ಹಾಗೂ ಈ ವಿಧೇಯಕಕ್ಕೆ ವಿಧಾನಸಭೆಯು ಸಮ್ಮತಿಯನ್ನು ನೀಡಬೇಕೆಂದು ಕೋರಲಾಗಿದೆ.

ಶ್ರೀ ಜಯಪ್ರಕಾಶ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಸಣ್ಣ ನೀರಾವರಿ ಕೆಲಸಕ್ಕೆ ಸಂಬಂಧಪಟ್ಟ ಹಾಗೆ ಕಳೆದ ಬಜೆಟ್‌ನಲ್ಲಿ ಪಾಸ್ ಆಗಿದ್ದು ಆದರಲ್ಲಿ ಗ್ರಾಂಟ್ಸ್ ಇದೆ. ಆದರೆ ಆ ಕೆಲಸಕ್ಕೆ ಇಷ್ಟರವರೆಗೆ ಅಪ್ರೂವಲ್ ಕೊಟ್ಟಿಲ್ಲ. ಅಪ್ರೂವಲ್ ಕೊಡದಿದ್ದರೆ ಹಣ ಲ್ಯಾಪ್ಸ್ ಆಗುತ್ತದೆ. ಆದಕ್ಕೋಸ್ಕರ, ಮಾನ್ಯ ಸಣ್ಣ ನೀರಾವರಿ ಸಚಿವರು ಇಷ್ಟರೊಳಗೆ ಆ ಕೆಲಸ ಮಾಡಿಸುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟರೆ ಒಳ್ಳೆಯದು. ನಾನು ನೋಟೀಸ್ ಕೊಟ್ಟು 2 ದಿವಸಗಳಾಗಿದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯಸಚಿವರು) : ಮಾನ್ಯ ಅಧ್ಯಕ್ಷರೆ, 27ನೇ ತಾರೀಖು ಟಿ.ಎ.ಸಿ. ಮೀಟಿಂಗ್ ಇದೆ. ಟಿ.ಎ.ಸಿ.ಯಲ್ಲಿ ಕ್ಲಿಯರ್ ಆಗಬೇಕು. ಅಲ್ಲಿ ಸಬ್‌ಸಿಕ್ವೆಂಟ್ ಆಗಿ ಏನು ಆಗುತ್ತದೆ. ಆ ಡಿಸಿಶನ್ ಆಧಾರದ ಮೇಲೆ ಮಾಡುತ್ತೇವೆ. ಕ್ಲಿಯರ್ ಆದ ತಕ್ಷಣ ಆ ಮೇಲೆ 31ರ ಒಳಗೆ ಕ್ಲಿಯರ್ ಆರ್ಡರ್ ಇಶ್ಯೂ ಮಾಡಲಾಗುವುದು. ಟಿ.ಎ.ಸಿ. ಕ್ಲಿಯರೆನ್ಸ್ ಕಮಿಟ್ ಆದ ತಕ್ಷಣ ಸದರಿ ಕೆಲಸವನ್ನು ತೆಗೆದುಕೊಳ್ಳಲಾಗುವುದು.

ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ, 2000

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರ ಪರವಾಗಿ : ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಾಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯಿಂದ ಕೊಡಲಾದ ನಿವೇಶನ, ಷೆಡ್ಡುಗಳನ್ನು ನಿಗದಿತ ಅವಧಿಯಲ್ಲಿ ನಿಗದಿತ ಉದ್ದೇಶಕ್ಕೆ ಬಳಸದೆ ಬೇರೆ ಉದ್ದೇಶಕ್ಕಾಗಿ ಬಳಸಿದರೆ ಅಂಥ ವ್ಯಕ್ತಿಗಳಿಂದ ಅದನ್ನು ವಾಪಸ್ಸು ಪಡೆದು ಇತರೇ ಅಪೇಕ್ಷಿತ ಅರ್ಜಿದಾರರಿಗೆ ಮರು ವಿತರಣೆ ಮಾಡುವ ಅಧಿಕಾರವನ್ನು ಕೆ.ಐ.ಎ.ಡಿ.ಬಿ.ಗೆ ನೀಡುವುದರ ಬಗ್ಗೆ ಈ ತಿದ್ದುಪಡಿಯನ್ನು ತರಲಾಗಿದೆ. ಇಷ್ಟು ಮಾತ್ರ ಇದರಲ್ಲಿ ಇದೆ; ಬೇರೆ ಯಾವುದೂ ಕೂಡ ಇಲ್ಲ. ಇದರಿಂದ ಏನಾಗುತ್ತದೆ ಎಂದರೆ ಸುಮ್ಮನೆ ಹತ್ತಾರು ವರ್ಷಗಳ ಕಾಲ ಅದನ್ನು ಇಟ್ಟುಕೊಂಡು ದುರುಪಯೋಗ ಮಾಡಿಕೊಳ್ಳುವುದು ತಪ್ಪಿಹೋಗುತ್ತದೆ. ಮತ್ತು ಅಪೇಕ್ಷಿತ ಅರ್ಜಿದಾರರಿಗೆ ಮರು ವಿತರಣೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಹಿಂದಿನ ಸರ್ಕಾರ ಮಂಡಿಸಿತ್ತು. ಇದನ್ನು ಈಗ ನಾವು ಪರ್ಯಾಲೋಚನೆ ಮತ್ತು ಅಂಗೀಕಾರಕ್ಕೆ ಈ ಸಭೆಯ ಮುಂದಿಟ್ಟಿದ್ದೇವೆ. ದಯಮಾಡಿ ಇದಕ್ಕೆ ಸದನದ ಒಪ್ಪಿಗೆಯನ್ನು ಕೊಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

+ ಶ್ರೀ ಸಿ. ಭೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ಈಗ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯ ನಿಯಮಾವಳಿಗೆ ತಿದ್ದುಪಡಿಯನ್ನು ಸರ್ಕಾರದವರು ತಂದಿದ್ದಾರೆ. ಈ ತಿದ್ದುಪಡಿ ತರಬೇಕಾಗಿದ್ದರೆ ಇದರ ಹಿಂದುಗಡೆ ಬಹಳ ಸಮಸ್ಯೆಗಳು ಇರಬಹುದು. ಕೈಗಾರಿಕೆ ಪ್ರಾರಂಭ ಮಾಡುವುದಕ್ಕೆ ಎರಡು ವರ್ಷಗಳ ಕಾಲಾವಧಿ ಕೊಟ್ಟು ಷೆಡ್ಡುಗಳನ್ನು ನಿವೇಶನವನ್ನು ಕೊಟ್ಟರೆ ಅದನ್ನು ನಿಗದಿತ ಸಮಯದೊಳಗೆ ಬಳಸಿಕೊಳ್ಳುವುದಿಲ್ಲ. ಆಗ ಪುನಃ ಅವರಿಂದ ಹಿಂದಕ್ಕೆ ಪಡೆದು ಅಪೇಕ್ಷಿತ ಅರ್ಜಿದಾರರಿಗೆ ಕೊಡಲಾಗುವುದು ಎಂದು ಹೇಳಿದ್ದಾರೆ. ಈ ಉದ್ದೇಶವನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಇದರ ಹಿಂದೆ ಅನೇಕ ಕೈಗಾರಿಕಾ ವಸಾಹತುಗಳಲ್ಲಿ ಸೈಟುಗಳನ್ನು ಅಲಾಟ್ ಮಾಡಿ ಅಲ್ಲಿ ಕಾರ್ಖಾನೆಗಳು ಬರದೇ ಇರತಕ್ಕಂಥವು ಬಹಳಷ್ಟು ಇವೆ. ಮತ್ತು ಈ ನಿವೇಶನವನ್ನು, ಷೆಡ್ಡುಗಳನ್ನು ಬೇರೆ ಬೇರೆ ಉದ್ದೇಶಗಳಿಗಾಗಿ ಬಳಕೆ ಮಾಡಿರತಕ್ಕಂಥ ಅನೇಕ ಉದಾಹರಣೆಗಳು ಇವೆ.. ದಯಮಾಡಿ ಈ ಕೆಳಕಂಡ ವಿವರಗಳನ್ನು ದಯಮಾಡಿ .ತಾವು ಕೊಡಬೇಕಾಗುತ್ತದೆ. ಆ ರೀತಿಯ ದುರ್ಬಳಕೆಗೆ ಆಗಿರತಕ್ಕಂಥಾದ್ದು ಎಷ್ಟು ನಿವೇಶನಗಳು ಮತ್ತು ಸ್ಪೆಕ್ಯುಲೇಟಿವ್ ಪರ್‌ಪಸ್‌ಗೆ ಎಷ್ಟೆಷ್ಟು ನಿವೇಶನಗಳು ಬಳಕೆ ಆಗಿವೆ? ಇವರು ಕೊಡುವ ಸಂದರ್ಭದಲ್ಲಿ, ಬಹಳ ಕಡಿಮೆ ಬೆಲೆಗೆ ಸೈಟ್ ಕೊಡುತ್ತಾರೆ. 10 ವರ್ಷಗಳ ನಂತರ, ಅದನ್ನು ಹಾಗೆಯೇ ಇಟ್ಟು ಕೊಂಡು, ಜಮೀನು ಕಳೆದುಕೊಂಡವರಿಗೆ ಅಲ್ಪಾವಧಿ ಪರಿಹಾರ ಧನ ಕೊಡುತ್ತಾರೆ. It is not even a throw away price. ಆ ಪ್ರೈಸ್‌ಗೆ ಇವರು ಜಮೀನನ್ನು ವಶಪಡಿಸಿಕೊಂಡಿರುವುದು. ಆ ಜಮೀನಿನ ಮಾಲೀಕರಿಗೆ ಸಿಗುತ್ತಿರುವುದು, it is not even a pittance. ಅಂಥದ್ದನ್ನು ವಶಪಡಿಸಿಕೊಂಡು ನಂತರ, ಇವರು ಕೈಗಾರಿಕೆಗಳಿಗೆ ಕೊಡುವುದು ಸಾಮಾನ್ಯವಾಗಿ, invariably it will be two or three times more than the acquisition price. ಈ ಮಧ್ಯ, ಇವತ್ತು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬೋರ್ಡ್ ಇರುವುದು, ಮಧ್ಯವರ್ತಿಗಳು ಇರತಕ್ಕಂಥದ್ದು

ಆದಷ್ಟು ಕಡಿಮೆ ದರದಲ್ಲಿ ಕೈಗಾರಿಕೆಗಳಿಗೆ ಜಮೀನನ್ನು ಒದಗಿಸಲು ಇದ್ದು, ಅದು ಬಹಳ ಮುಖ್ಯ. ಆ ಉದ್ದೇಶ ಸರಿಯಾಗಿ ಈಡೇರುತ್ತಿಲ್ಲ. ಅದಕ್ಕೆ ಬದಲಾಗಿ ಸ್ಪೆಕ್ಯುಲೇಟಿವ್ ಪರ್ಪಸ್‌ಗೆ ಈ ಜಮೀನಿನ ಬಳಕೆ ಆಗುತ್ತಿರುವುದು, ಶ್ರೀ ಖರ್ಗೆಯವರ, ನಮ್ಮೆಲ್ಲರ ಅನುಭವವೂ ಹೌದು. ಆದರೆ, ಇವತ್ತು ಆ ರೀತಿಯಾಗಿ ಎಷ್ಟು ನಿವೇಶನಗಳಿವೆ? ಎನ್ನುವುದನ್ನು ತಾವು ಸಭೆಯ ಗಮನಕ್ಕೆ ತರುವುದು ಅವಶ್ಯಕ. ಇದನ್ನು ದಯವಿಟ್ಟು ತಿಳಿಸಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ. ಭೂಮಿಯನ್ನು ಕೊಳ್ಳುವ ಸಂದರ್ಭದಲ್ಲಿ, ರೈತರ ಹೊಟ್ಟೆ ಮೇಲೆ ಹೊಡೆಯುವ ಕೆಲಸವಾಗುತ್ತಿದೆ. ನಾನು ಅಗಲೇ ಹೇಳಿದ ಹಾಗೆ, what they are paying is not even a pittance. ಕೆಲವು ಕಡೆ ಒಂದು, ಒಂದೂವರೆ ಲಕ್ಷ ರೂಪಾಯಿಗಳಿಗೂ ಇಲ್ಲ. ಇವರು ಸಬ್-ರಿಜಿಸ್ಟ್ರಾರ್ ಅಂಕಿ-ಅಂಶದ ಪ್ರಕಾರ ಹೋಗುತ್ತಾರೆ. ಅದರ ಮೇಲೆ sale value ಎಂದು ಹೇಳುತ್ತಾರೆ. ಅದೆಲ್ಲವನ್ನೂ ಹಾಕಿದರೂ, ಮಾರ್ಕೆಟ್ ಬೆಲೆಗೂ, ಇವರು ಕೊಡುವ ಬೆಲೆಗೂ ಭೂಮಿ-ಆಕಾಶದಷ್ಟು ವ್ಯತ್ಯಾಸವಿರುವುದನ್ನು ನಾವು ಕಾಣಬಹುದು. ಆದ್ದರಿಂದ, ಇವತ್ತು ಏನಾಗಿದೆಯೆಂದರೆ, ಒಂದು ಕಡೆ ಭೂಮಿಯನ್ನು ಕೊಡುವುದಕ್ಕೆ ರೈತರು ಮುಂದೆ ಬರುತ್ತಿಲ್ಲ. ಕಾನೂನಿನ ಪ್ರಕಾರ ಇವರು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಕ್ರಮ ಮುಗಿದಿದ್ದರೂ ಸಹ, ಅನೇಕ ಕಡೆ ಇವರು ನ್ಯಾಯಾಲಯಗಳಿಗೆ ಹೋಗುತ್ತಾರೆ. ಹತ್ತಾರು ವರ್ಷಗಳಾದರೂ ಆ ಮೊಕದ್ದಮೆಗಳು ಹಾಗೇಯೇ ಬಾಕಿ ಉಳಿದಿರುವುದೂ ಉಂಟು. ಇದಕ್ಕೆಲ್ಲ ಮೂಲ ಕಾರಣ, ನೀವು ಜಮೀನಿನ ಮಾಲೀಕರಿಗೆ ಕೊಡುವ ಹಣ ಏನಿದೆ, ಕಾಂಪೆನ್‌ಸೇಷನ್ ಏನಿದೆ ಇದು it is negligible. ಕನಿಷ್ಠ ಮಾರ್ಕೆಟ್ ಧಾರಣೆಯನ್ನು ನೀವೇ ನಿಗದಿಪಡಿಸುತ್ತೀರಿ, ಆ ಧಾರಣೆಗಾದರೂ ಜಮೀನನ್ನು ವಶಪಡಿಸಿಕೊಳ್ಳದಿದ್ದರೆ, ಆ ಭೂಮಿಯನ್ನು ಕಳೆದುಕೊಳ್ಳುತ್ತಾರೆ. ಆ ಭೂಮಿಯಲ್ಲಿ ಅನೇಕ ಕಡೆ ಏನನ್ನೂ ಬೆಳೆಯದಿರಬಹುದು. ಆದರೆ, ಭೂ ಮಾಲಿಕರಿಗೂ, ಆ ಭೂಮಿಗೂ ಸಂಬಂಧ ಹೇಗಿರುತ್ತದೆ ಎಂಬುದನ್ನು ನಾವು ಊಹೆ ಮಾಡಬೇಕಾಗುತ್ತದೆ. ರೈತನಿಗೆ ಭೂಮಿ ಮೇಲಿರುವ ಮಮತೆ, ವಿಶ್ವಾಸ, ಅಟ್ಯಾಚ್‌ಮೆಂಟ್ ಏನಿದೆ ಅದಕ್ಕೆ ಬೆಲೆ ಕಟ್ಟಲಾಗುವುದಿಲ್ಲ. ಮುಂದೆ ಬರುವ ತಲಾ-ತಲಾಂತರಕ್ಕೂ ಭೂಮಿಯನ್ನು ಕಳೆದುಕೊಳ್ಳುವ ಸಂದರ್ಭದಲ್ಲಿ, ಜಮೀನಿನ ಮಾಲೀಕರಿಗೆ ನೋವುಂಟು ಮಾಡಿ, ಜಮೀನನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದೀರಿ. ಕೇವಲ ಕೈಗಾರಿಕೆಗಳಿಗೆ ವಶಪಡಿಸಿಕೊಳ್ಳುವ ಭೂಮಿ ಬಗ್ಗೆ ನಾನು ಮಾತನಾಡುತ್ತಿಲ್ಲ. ಯಾವುದೇ ಉದ್ದೇಶಕ್ಕಾದರೂ ಜಮೀನನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ನೀವು ಆ ರೈತನಿಗೆ ಮಾರ್ಕೆಟ್ ಬೆಲೆಗಿಂತ ಹೆಚ್ಚು ಕೊಟ್ಟರೂ ಸಂತೋಷ. ಉದಾಹರಣೆಗೆ, ನಮ್ಮ ಜಿಲ್ಲೆಯಲ್ಲಿ, ಇವತ್ತಿನದಿವಸ, power grid, receiving station ಬರುತ್ತಿದೆ. 150 ಎಕರೆಯನ್ನು ಕೋಲಾರ ನಗರದ ಪಕ್ಕದಲ್ಲಿ ವಶಪಡಿಸಿಕೊಳ್ಳುವ ಕೆಲಸ ನಡೆಯುತ್ತಿದೆ. ಕೇಂದ್ರ ಸಚಿವರಾದ ಶ್ರೀ ಕುಮಾರಮಂಗಳಂ ಅವರು ಅಡಿಗಲ್ಲು ಇಡುವ ಸಂದರ್ಭದಲ್ಲಿ, ಅಲ್ಲಿನ ರೈತರ ಪರವಾಗಿ ನಾನು ಅವರಲ್ಲಿ ವಿನಂತಿ ಮಾಡಿ, ಬಹಳ ಕಡಿಮೆ ದರದಲ್ಲಿ ಜಮೀನನ್ನು ವಶಪಡಿಸಿಕೊಳ್ಳುತ್ತಿದ್ದೀರಿ, ಆದಕ್ಕೆ ಹೆಚ್ಚಿನ ಹಣ ಕೊಡಿ ಎಂದಾಗ, ನನಗೆ ನೆನಪಿರುವ ಹಾಗೆ, ಅವರು ನಿಗದಿಪಡಿಸಿದ್ದಕ್ಕಿಂತ ಎರಡಷ್ಟು ಹಣವನ್ನು ಕೊಡುತ್ತೇವೆಂಬ ಘೋಷಣೆಯನ್ನು ಸ್ಥಳದಲ್ಲೇ ಮಾಡಿದ್ದು, ಇವತ್ತು ರೈತರು ಬಹಳ ಸಂತೋಷದಿಂದ ಜಮೀನು ಬಿಡುವುದಕ್ಕೆ ಒಪ್ಪಿರುವುದಿದೆ. ಜಮೀನನ್ನು ವಶಪಡಿಸಿಕೊಳ್ಳುವ

ಸಂದರ್ಭದಲ್ಲಿ ರೈತರ ಮನಸ್ಸಿಗೆ ನೋವುಂಟು ಮಾಡುವ ರೀತಿಯಲ್ಲಿ ಮಾಡಕೂಡದು. ಎಷ್ಟು ಲಿಬರಲ್ಲಾಗಿ ಇರುವುದಕ್ಕೆ ಸಾಧ್ಯವೋ, ಅದಕ್ಕಿಂತ ಹೆಚ್ಚು ಲಿಬರಲ್ ಆಗಿರುವ ಅವಶ್ಯಕತೆ ಇದೆ. ಬೆಂಗಳೂರಿನ ಸುತ್ತ ಮುತ್ತಲಿನಲ್ಲಿರುವ ಜಮೀನನ್ನು ನಿವೇಶನಗಳಿಗಾಗಿ ವಶಪಡಿಸಿಕೊಳ್ಳುವುದಿದೆ. ಒಂದೂಂದು ನಿವೇಶನದ ಬೆಲೆಯಲ್ಲಿ ರೈತನಿಗೆ ಕೊಟ್ಟಿರುವುದು ಕೆಲವು ಸಾವಿರ ರೂಪಾಯಿಗಳು ಮಾತ್ರ. ಆದರೆ ಆದು ನಿವೇಶನವಾದ ಮೇಲೆ ಸಾವಿರ, ಲಕ್ಷಗಳಾಗಿ, ಕೆಲವು ಸಂದರ್ಭಗಳಲ್ಲಿ ಕೋಟಿ ರೂಪಾಯಿಗಳಾಗುತ್ತದೆ. ಈ ಅನ್ಯಾಯ ತಾರತಮ್ಯವನ್ನು ಸರಿಪಡಿಸುವ ಅವಶ್ಯಕತೆ ಇದೆ. ಭೂ ಸ್ವಾಧೀನ ಮಸೂದೆಗೆ ತಿದ್ದುಪಡಿಯನ್ನು ತಂದು ಕಾನೂನಿದೆ, ಕಾನೂನಿನ ಪ್ರಕಾರ ನಡೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಹೋದರೂ ಕೂಡ, ಆದು ಸರಿಯಾದುದಲ್ಲ. ಕಾನೂನು ಇರುವುದು ಜನತೆ, ಸಮಾಜದ ಅನುಕೂಲತೆಗೋಸ್ಕರ. ಆದ್ದರಿಂದ ಈ ಕಾನೂನಿನ ತಿದ್ದುಪಡಿಯಾಗುವ ಅವಶ್ಯಕತೆ ಇದೆ. ಜಮೀನನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಅನೇಕ ಕಡೆ ರಸ್ತೆ ಕೆಲಸಗಳಿಗೆ, ಕರೆ ಕಟ್ಟುವುದಕ್ಕೆ, ದೊಡ್ಡ ದೊಡ್ಡ ಪ್ರಾಜೆಕ್ಟ್ ಮಾಡುವುದಕ್ಕೆ, ಯುಕೆಪಿ, ನಾರಾಯಣಪುರ ಡ್ಯಾಮ್ ಕಟ್ಟಿದ್ದಾಯಿತು, ಆಲಮಟ್ಟಿ ಡ್ಯಾಮ್ ಕಟ್ಟಿದ್ದಾಯಿತು, ಇವೆಲ್ಲ ಕಟ್ಟಬೇಕಾದರೆ ಜಮೀನು ಬೇಕಾಗುತ್ತದೆ. ಜಮೀನು ಬೇಕಾಗುವ ಸಂದರ್ಭದಲ್ಲಿ, ವಶಪಡಿಸಿಕೊಂಡ ಜಮೀನನ್ನು ಎಚ್ಚರಿಕೆಯಿಂದ ನೋಡುವ ಅವಶ್ಯಕತೆ ಇದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಈ ಕೆಲಸ ಮಾಡಬೇಕೆಂಬ ಸಲಹೆ ನೀಡುತ್ತೇನೆ. ಇವತ್ತು ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುತ್ತೇವೆಂಬ ಭರವಸೆಯನ್ನು ಸದನದಲ್ಲಿ ನೀಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಸದಸ್ಯರಾದ ಶ್ರೀ ಸಿ. ಭೈರೇಗೌಡರು ಸಾಕಷ್ಟು ವಿಷಯಗಳನ್ನು ಪ್ರಸ್ತಾಪಿಸಿದರು. ನಾನು ಮಾನ್ಯ ಸಚಿವರಿಗೆ ಹೇಳುವುದಿಷ್ಟೆ, ರಾಜ್ಯದಲ್ಲಿ ಅನಗತ್ಯವಾಗಿ ಬಹಳಷ್ಟು ಭೂಮಿಯನ್ನು ಸ್ವಾಧೀನ ಮಾಡಿದ್ದಾರೆ. ಕೈಗಾರಿಕೆಯ ಹೆಸರಿನಲ್ಲಿ ಇವತ್ತು ಗ್ರೋಥ್ ಸೆಂಟರ್ ಎಂದು ಹೇಳಿ ಲಕ್ಷಾಂತರ ಎಕರೆಯನ್ನು, ಹಾಸನದಲ್ಲಿರಬಹುದು ಬಿಡದಿಯಲ್ಲಿಬರಬಹುದು, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ವಾಧೀನಪಡಿಸಿಕೊಂಡು, ಭೂಮಿಯ ಮಾಲೀಕರಿಂದ ಬಹಳ ಕಡಿಮೆ ಬೆಲೆಗೆ ತೆಗೆದುಕೊಂಡು, ಅಲಾಟೀಸ್‌ಗೆ ಒಂದಕ್ಕೆ 4,10 ರಷ್ಟು ಬೆಲೆಯನ್ನು ನಿಗದಿಪಡಿಸಿ, ಅವರಿಗೆ ಕೊಟ್ಟು, ಅವರು ಯಾವುದೇ ಕೈಗಾರಿಕೆಯನ್ನೂ ಪ್ರಾರಂಭಿಸದೆ, ಹಾಗೆಯೇ ಇಟ್ಟುಕೊಂಡಿರುವ ಚಿತ್ರವನ್ನು ನಾವು ನೋಡುತ್ತಿದ್ದೇವೆ. ಮಾನ್ಯ ಭೈರೇಗೌಡರವರು ತಿಳಿಸಿದ ಹಾಗೆ, ರೈತರಿಗೆ ಬೆಳೆಯನ್ನೂ ತೆಗೆಯಲಾಗಲಿಲ್ಲ, ಅದರ ಉಪಯೋಗವೂ ಆಗಲಿಲ್ಲ; ಈ ಕಡೆ ಕೈಗಾರಿಕೆಯೂ ಬೆಳೆಯಲಿಲ್ಲ. ಇದಕ್ಕೆ ತಂದಿರುವ ತಿದ್ದುಪಡಿ ಸರಿ ಇದೆ, ನಾನೂ ಇದನ್ನು ಒಪ್ಪುತ್ತೇನೆ. ಆದರೆ, ಯಾರು ಅಲಾಟಿ ಇದ್ದಾರೆ, ಅವರು ಸ್ಪಿಪ್ಯುಲೇಟೆಡ್ ಪೀರಿಯಡ್‌ನಲ್ಲಿ ಭೂಮಿಯನ್ನು ಉಪಯೋಗಿಸಿಕೊಳ್ಳದೆ, ದುರುಪಯೋಗ ಮಾಡಿಕೊಂಡಾಗ, ಅವರನ್ನು ಅಲ್ಲಿಂದ ತೆರವು ಮಾಡಿ ನೇರವಾಗಿ ಸ್ವಾಧೀನ ಮಾಡಿಕೊಳ್ಳುವ ವ್ಯವಸ್ಥೆ ಆಗಬೇಕು ಇವತ್ತು ಈ ರೀತಿ ಸ್ವಾಧೀನಪಡಿಸಿಕೊಂಡು ವಿನಾಕಾರಣ ಅದರ ಅಭಿವೃದ್ಧಿಯತ್ತ ಕೋಟ್ಯಾಂತರ ರೂಪಾಯಿಗಳನ್ನು ತೊಡಗಿಸಿದ್ದಾರೆ. ಕೆಐಎಡಿಬಿಯಲ್ಲಿ ಎರಡು-ನಾಲ್ಕು ಲಕ್ಷ ರೂಪಾಯಿಗಳಿರುವ ಭೂಮಿಯನ್ನು ಹತ್ತಾರು ಲಕ್ಷ ರೂಪಾಯಿಗಳನ್ನು ಕೊಟ್ಟು, ಅದನ್ನು ಎಸ್ಕಲೇಷನ್ ಮಾಡಿ ಅದನ್ನು ಅಲಾಟೀಸ್‌ಗೆ

ಕೊಡಬೇಕಾದ ಬೆಲೆಗೆ ಕೊಡದೆ, ಸಾಕಷ್ಟು ದುರುಪಯೋಗವಾಗಿರುವುದು ಈ ರಾಜ್ಯದಲ್ಲಿದೆ. ಅದನ್ನು ಸರಿಪಡಿಸಬೇಕಾಗುತ್ತದೆ. ವಿನಾಕರಣ, ಸ್ವಾಧೀನಪಡಿಸಿಕೊಳ್ಳುತ್ತೇವೆಂದು ಹೇಳಿ, ಹತ್ತಾರು ವರ್ಷಗಳು ಆ ಭೂಮಿಯನ್ನಿಟ್ಟುಕೊಂಡಿರುತ್ತಾರೆ. ಐಟಿ ಪಾರ್ಕ್ ಹತ್ತಿರ ಕೆಐಎಡಿಬಿಯು ಭೂಮಿ ಸ್ವಾಧೀನ ಪಡಿಸಿಕೊಂಡಿದೆ. ಅಲ್ಲಿನ ಅಲಾಟ್‌ಮೆಂಟ್ ದರ ಇವತ್ತು ಕೋಟ್ಯಾಂತರ ರೂಪಾಯಿಗಳಾಗುತ್ತದೆ. ಯಾವುದೇ ಕೈಗಾರಿಕೋದ್ಯಮಿ ಬಂದು ಅದನ್ನು ತೆಗೆದುಕೊಳ್ಳುವ ಶಕ್ತಿ ಇಲ್ಲ. ಆ ರೀತಿ ಬೆಲೆಯನ್ನು ಜಾಸ್ತಿ ಮಾಡುವುದು ತಪ್ಪಬೇಕು. ರಾಜ್ಯದಲ್ಲಿ ಕೈಗಾರಿಕೆಗಳು ಎಷ್ಟು ಬರುತ್ತವೆ? ಅದರ ಅವಶ್ಯಕತೆ ಏನು? Single Window agencyಯಲ್ಲಿ ಯಾವ ರೀತಿ ಕೊಡುವ ವ್ಯವಸ್ಥೆ ಇದೆ? ಇದನ್ನು ನೋಡುವ ವಿಧಾನವನ್ನು ಸರ್ಕಾರ ಮಾಡಬೇಕಾಗುತ್ತದೆ. ಆ ದಿಸೆಯಲ್ಲಿ ಸರ್ಕಾರ ಯೋಚಿಸಬೇಕು. ಇವತ್ತು ರಾಜ್ಯದಲ್ಲಿ ನಾವು ಕೈಗಾರಿಕೀಕರಣ ಮಾಡುತ್ತೇವೆಂದು ತೋರಿಸಿಕೊಂಡು, ಗ್ರೋರ್ಥ್ ಸೆಂಟರ್ ಕೌಂಟರ್ ಮ್ಯಾಗ್ನೆಟ್‌ಸಿಟಿ ಡೆವಲಪ್‌ಮೆಂಟ್ ಮಾಡುವ ವ್ಯವಸ್ಥೆ ಇವೆಲ್ಲ ನೋಡಿಕೊಂಡು ಆ ಹೆಸರಿನಲ್ಲಿ ರೈತನ ಹೊಟ್ಟೆ ಮೇಲೆ ಹೊಡೆಯುವುದು ತಪ್ಪಬೇಕು. ರೈತನ ಜಮೀನನ್ನು ಕಿತ್ತುಕೊಂಡು, ಯಾವುದೋ ಕೈಗಾರಿಕೋದ್ಯಮಿಗಳಿಗೆ ಕೊಡುತ್ತೇವೆಂದು, ಅದನ್ನು ಬೇನಾಮಿ ವ್ಯವಸ್ಥೆ ಮಾಡಿಕೊಂಡಿರುವ ವ್ಯವಸ್ಥೆ ಇದೆ. ಅಲಾಟ್ ಮಾಡಿಸಿಕೊಳ್ಳುವುದು, ಹೆಚ್ಚು ಹಣ ಸಿಗುತ್ತದೆಂದು ಅವರ ಹೆಸರಿನಲ್ಲಿ ಹತ್ತಾರು ವರ್ಷ ಇಟ್ಟುಕೊಂಡು, ಬೇನಾಮಿ ಟ್ರಾನ್ಸಾಕ್ಷನ್ ಮಾಡುವುದು. ನೇರವಾಗಿ ಯಾರೂ ಅಭಿವೃದ್ಧಿ ಮಾಡುತ್ತಾರೆ? ಇವತ್ತು ಬಿಡಿಎನಲ್ಲಿ ಹಾಗೇ ಆಯಿತು. ಸೈಟ್ ಅಲಾಟ್ ಮಾಡಿಸಿಕೊಳ್ಳುವುದು, ಹತ್ತಾರು ವರ್ಷ ಇಟ್ಟುಕೊಳ್ಳುವುದು. ಅವನಿಗೆ ಎರಡು ಲಕ್ಷ ಕೊಟ್ಟರೆ, ಯಾರಿಗೋ ಮಾರಿಕೊಳ್ಳುವುದು. ನಮ್ಮ ಬಡಾವಣೆಗಳಲ್ಲಿ ಇವತ್ತು ಎರಡು ಕೋಟಿ ರೂಪಾಯಿಗಳಿಗೆ ಮಾರಿಕೊಂಡು ಹಣ ಮಾಡುವ ವ್ಯವಸ್ಥೆ ಇದೆ. ಆ ರೀತಿಯ ದುರುಪಯೋಗವನ್ನು ತಡೆಗಟ್ಟಬೇಕೆಂದು ಮಾನ್ಯ ಸಚಿವರಿಗೆ ನಾನು ತಿಳಿಸಬಯಸುತ್ತೇನೆ.

12.50 ಪಿ.ಎಂ

ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಹಿರಿಯ ಸದಸ್ಯರಾದ ಭೈರೇಗೌಡರವರು ಹೇಳಿದ ಹಾಗೆ, ರಾಜ್ಯ ಸರ್ಕಾರ ಭೂಮಿಯನ್ನು ವಶಪಡಿಸಿಕೊಂಡು, ಕೈಗಾರಿಕಾ ನಿವೇಶನಗಳು ಎಂದು ವಿಂಗಡಿಸಿ ಕೈಗಾರಿಕೆ ಮಾಡುವಂತಹರಿಗೆ ಏನು ನಿವೇಶನಗಳನ್ನು ಕೊಟ್ಟಿದ್ದಾರೆ ಅವರಲ್ಲಿ ಕೆಲವರು ಕೆಲವು ಸೈಟುಗಳನ್ನು ಹಾಗೆಯೇ ಇಟ್ಟುಕೊಂಡು ಬೇರೆಯವರಿಗೆ ಮಾರಾಟ ಮಾಡತಕ್ಕಂಥ ಪರಿಸ್ಥಿತಿ ಇದೆ. ಉದಾಹರಣೆಗೆ ಹೇಳುವುದಾದರೆ, ಒಂಭತ್ತು ವರ್ಷಗಳ ಹಿಂದೆ ಬೆಂಗಳೂರು ಗ್ರಾಮಾಂತರ ಪ್ರದೇಶದ ವ್ಯಾಪ್ತಿಯಲ್ಲಿ ಬರತಕ್ಕಂಥ ದಾಬಾಸ್‌ಪೇಟೆಯ ಬಳಿ ಸುಮಾರು ಎರಡು ಸಾವಿರ ಏಕರೆ ಜಮೀನನ್ನು ವಶಪಡಿಸಿಕೊಂಡು ಕೈಗಾರಿಕೆಗಾಗಿ ನೀಡಲಾಗಿತ್ತು. ಯಾರಿಗಾಗಿ ಇವರು ಜಮೀನನ್ನು ಕೊಟ್ಟಿದ್ದರೋ ಅವರು ಅಲ್ಲಿ ಬಂದು ಕೈಗಾರಿಕೆ ಸ್ಥಾಪಿಸಲಿಲ್ಲ ಹಾಗೂ ಜಮೀನನ್ನು ವಶಪಡಿಸಿಕೊಳ್ಳುವಂತಹ ಸಂದರ್ಭದಲ್ಲಿ ರೈತರಿಗೂ ಕೂಡ ಸರಿಯಾಗಿ ಪರಿಹಾರ ಸರ್ಕಾರ ನೀಡಲಿಲ್ಲ. ಈ ಜಮೀನನ್ನು ಸರ್ಕಾರ ಆಗ ವಶಪಡಿಸಿಕೊಂಡಾಗ ಒಂದು ಏಕರೆಗೆ ಒಂದು ಲಕ್ಷದ ಹದಿನೈದು ಸಾವಿರ ರೂಪಾಯಿಗಳನ್ನು ನೀಡಿದ್ದು ಈಗ ಅದೇ ಜಮೀನು ಒಂದು

ಏಕರೆಗೆ ಎಂಟು ಲಕ್ಷ ರೂಪಾಯಿಗಳಿಗೆ ಮಾರಾಟವಾಗುತ್ತಿದೆ. ಈ ಜಮೀನನ್ನು ಉಳುಮೆಗೂ ಅವಕಾಶ ಕೊಡಲಿಲ್ಲ ಹಾಗೂ ಅಲ್ಲಿ ಇದುವರೆವಿಗೂ ಯಾವುದೇ ಕೈಗಾರಿಕೆ ಕೂಡ ನಿರ್ಮಾಣವಾಗಲಿಲ್ಲ. ಇದರಲ್ಲಿ ಸುಮಾರು ಇನ್ನೂರು ಏಕರೆಯ ಜಮೀನನಲ್ಲಿ ಬಿ.ಪಿ.ಎಲ್ ಸಂಸ್ಥೆ ಮಾತ್ರ ಇತ್ತೀಚಿಗೆ ಕಾರ್ಯ ನಿರ್ವಹಿಸುತ್ತಿದೆ. ಮಿಕ್ಕಂಥ ಸುಮಾರು ಸಾವಿರದ ಎಂಟುನೂರು ಎಕರೆ ಜಮೀನು ಹಾಗೆಯೇ ಉಳಿದುಕೊಂಡಿದೆ. ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ಏನು ಒತ್ತಾಯ ಮಾಡುತ್ತೇನೆಂದರೆ, ಇಂಥ ಜಮೀನನ್ನು ರೈತರಿಗೆ ಕಿರುಕುಳ ನೀಡಿ, ರೈತರಿಗೆ ಕಡಿಮೆ ಬೆಲೆ ನೀಡಿ, ತೆಗೆದುಕೊಂಡು ಅಲ್ಲಿ ಕೈಗಾರಿಕೆಯೂ ಸ್ಥಾಪನೆಯಾಗದ ಹಾಗೆ ಮತ್ತು ಅಲ್ಲಿ ಉಳಿಮೆ ಮಾಡುವುದಕ್ಕೆ ಕೂಡ ಅವಕಾಶ ಇಲ್ಲದ ಹಾಗೆ ಮಾಡಬೇಡಿ. ಆದ್ದರಿಂದ ಇಂಥ ಕ್ರಮವನ್ನು ಸರ್ಕರದವರು ದಯಮಾಡಿ ಕೈಬಿಟ್ಟು ರೈತರಿಗೆ ಸರಿಯಾದ ಬೆಲೆಕೊಟ್ಟು ಜಮೀನು ತೆಗೆದುಕೊಳ್ಳಬೇಕು ಹಾಗೂ ಈ ರೀತಿ ಜಮೀನು ತೆಗೆದುಕೊಂಡ ಮೇಲೆ ಅಲ್ಲಿ ಕೂಡಲೇ ಕೈಗಾರಿಕೆ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ರೀತಿ ಕೈಗಾರಿಕೆಗಳು ಬೃಹದಾಕಾರವಾಗಿ ಬೆಳೆದು ರಾಜ್ಯಕ್ಕೆ ಅನುಕೂಲವಾದ ಉತ್ಪತ್ತಿಯನ್ನು ಕೊಡಬೇಕು ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ತರುವಂತಹ ಉದ್ದೇಶದ ಬಗ್ಗೆ ವಿಚಾರಗಳನ್ನು ಇಲ್ಲಿ ಹೇಳಿದ್ದಾರೆ. ಉದ್ದೇಶ ಏನೋ ಒಳ್ಳೆಯದೇ ಆದರೆ ಒಂದು ಸಲ ನಾವು ಇದರ ಹಿಂದೆ ತಿರುಗಿ ನೋಡಿದರೆ ಇಂಥ ಒಳ್ಳೆಯ ಉದ್ದೇಶಗಳು ಏನೇನು ಆಗಿವೆ ಎಂದು ವಿಚಾರ ಮಾಡಬೇಕಾಗುತ್ತದೆ, ನಂತರ ಇವು ಯಾವ ರೀತಿಯಲ್ಲಿ ದುರುಪಯೋಗವಾಗಿದೆ ಎನ್ನುವುದನ್ನು ಸಹ ವಿಚಾರ ಮಾಡಬೇಕಾಗುತ್ತದೆ. ನಂತರ ಇದಕ್ಕೆ ಕಾನೂನು ತೊಡಕು ಏನಿದೆ ಎಂಬುದರ ಬಗ್ಗೆ ಹೇಳುತ್ತೇನೆ. ಅದಕ್ಕಿಂತ ಮೊದಲು ಕೆ.ಎ.ಐ.ಡಿ.ಬಿ ಆಕ್ಟ್‌ಗೆ ಎರಡು ವರ್ಷದಲ್ಲಿ ಯಾವ ಯಾವ ಭೂಮಿಯನ್ನು ಉಪಯೋಗಿಸಿಲ್ಲ ಅದನ್ನು ಹಿಂತೆಗೆದುಕೊಳ್ಳಬೇಕು ಎಂಬುದು ಸ್ವಾಗತಾರ್ಹ. ಈಗಾಗಲೇ ಇಪ್ಪತ್ತು ವರ್ಷಗಳ ಹಿಂದೆ ಕೆ.ಯು.ಡಿ.ಎ. ಆಕ್ಟ್‌ಗೆ ಇದೇ ತರಹ ಒಂದು ತಿದ್ದುಪಡಿ ಮಾಡಿದಿರಿ. ನಗರ ಪ್ರದೇಶಗಳಲ್ಲಿರುವಂತಹ ನಿವೇಶನಗಳನ್ನು ಹಂಚಿದಂತಹ ಸಂದರ್ಭದಲ್ಲಿ ಯಾರು ಎರಡು ವರ್ಷದ ಒಳಗಡೆ ಅದನ್ನು ಉಪಯೋಗಿಸದಿದ್ದಲ್ಲಿ ಅದನ್ನು ಹಿಂದೆ ತೆಗೆದುಕೊಳ್ಳುವ ಅಧಿಕಾರ ಹಾಗೂ ಯಾರೂ ಅಲ್ಲಿ ನಿಜವಾಗಿ ವಾಸ ಮಾಡುತ್ತಿದ್ದಾರೆ ಅಂಥವರಿಗೆ ಕೊಡಬೇಕು ಎಂದು ಈ ಕೆ.ಯು.ಡಿ.ಎ. ಆಕ್ಟ್‌ನಲ್ಲಿ ಪ್ರಾವಿಜನ್ ಮಾಡಿದಿರಿ. ಎಷ್ಟು ನಿವೇಶನಗಳನ್ನು ಎರಡು ದಶಕಗಳಲ್ಲಿ ಈ ರೀತಿ ವಾಪಸ್ ಪಡೆದಿದ್ದೀರಿ?

ಅಧ್ಯಕ್ಷರು : ತಾವು ಹೇಳುತಕ್ಕಂಥದ್ದು ಹೌಸ್ ಸೈಟ್ಸ್ ಅಥವಾ ಇಂಡಸ್ಟ್ರಿಯಲ್ ಸೈಟ್ಸ್? ಇಂಡಸ್ಟ್ರಿಯಲ್ ಸೈಟ್ಸ್ ಬಗ್ಗೆ ಹೇಳಿ.

+ ಶ್ರೀ ಎ. ರಾಮದಾಸ್ : ಆ ಎರಡು ವಿಚಾರಗಳು ಇಲ್ಲಿ ಬರುತ್ತದೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಅಲ್ಲಿದ್ದಂಥ ಷೆಡ್ಡುಗಳಿಗೆ ಇದ್ದಂಥ ಒಂದು ಕಾನೂನನ್ನು ಅಲ್ಲಿರುವಂತಹ ಆವರಣ ಮತ್ತು ವಾಸದ ಮನೆ ಎನ್ನುವಂತಹ ರೀತಿಯಲ್ಲಿ ಬದಲಾಯಿಸಿಕೊಳ್ಳಬೇಕು ಎಂದು

ಅಮೆಂಡ್‌ಮೆಂಟ್‌ನಲ್ಲಿದೆ. ಈ ನಿಟ್ಟಿನಲ್ಲಿ ಷೆಡ್ಡುಗಳನ್ನು ಮಾತ್ರ ವಶಪಡಿಸಿಕೊಳ್ಳಬೇಕು ಎನ್ನುವ ವ್ಯವಸ್ಥೆ ಇದ್ದದ್ದನ್ನು ಆವರಣದಲ್ಲಿರುವಂತಹ ಎಲ್ಲಾ ಪ್ರದೇಶವನ್ನು ಹಿಂದೆ ತೆಗೆದುಕೊಳ್ಳಬೇಕು ಎನ್ನುವ ಅಂಶ ಸ್ವಾಗತಾರ್ಹವಾದರೂ ಕೂಡ, ಹಿಂದೆ ಈ ರೀತಿ ನೋಟೀಸ್ ಅನ್ನು ಸರ್ವೆ ಮಾಡಿಸಿ ಅದರ ಮೂಲಕ ಸಂಬಂಧಪಟ್ಟಿರತಕ್ಕಂಥ ಇಲಾಖೆಯವರು ಇದನ್ನೇ ಒಂದು ವ್ಯವಹಾರವನ್ನಾಗಿ ಮಾಡಿಕೊಂಡು ಸಂಪಾದನೆಗೆ ಮೂಲವನ್ನಾಗಿ ಮಾಡಿಸಿಕೊಂಡಿರುವಂತಹ ಪ್ರಕರಣಗಳು ನಮ್ಮ ಮುಂದಿವೆ. ಇದಕ್ಕೆ ಸಂಬಂಧಪಟ್ಟಂತೆ ತಾವು ಏನು ಕಾನೂನಿನ ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ತಾವು ಹೇಳಬೇಕು. ಇನ್ನು ಎರಡನೆಯದಾಗಿ 14ರಲ್ಲಿ ವಾಸದ ಮನೆಗಳನ್ನು ತಾವು ಅಕ್ವೈರ್ ಮಾಡಿಕೊಳ್ಳಲಿಕ್ಕೆ ಹೊರಟಾಗ ಇಂಡಸ್ಟ್ರಿಯಲ್ ಏರಿಯಾದಲ್ಲಿ ಯಾವುದಕ್ಕೆ Comprehensive Development Project Area ಪ್ರಕಾರದಲ್ಲಿ ಪ್ಲಾನ್‌ನಲ್ಲಿ ನಿಮಗೆ ನಿಶ್ಚಯವಾಗಿರುವ ಪ್ರಕಾರದಲ್ಲಿ if it is an industrial land, nobody can construct the domestic house ಹೀಗಿರುವುದರಿಂದ ಅಲ್ಲಿ ಅವರು ಸರ್ಕಾರಕ್ಕೆ ಪರಿವರ್ತನೆಗೋಸ್ಕರವಾಗಿ ಅಂದರೆ ಇಂಡಸ್ಟ್ರಿಯಲ್ ಜಾಗವನ್ನು ವಾಸದ ಮನೆಯಾಗಿ ಪರಿವರ್ತನೆ ಮಾಡಿಲಿಕ್ಕೆ ಹಣವನ್ನು ಕಟ್ಟಿದ್ದಾರೆ, ನೀವು ಅವರಿಗೆ ಪರವಾನಗಿಯನ್ನು ಕೊಟ್ಟಿದ್ದೀರಿ. ಬೇಕಾಗಿರುವಂತಹ ಕನ್‌ವರ್ಷನ್ ಫೀ ಅನ್ನು ಕಟ್ಟಿಸಿಕೊಂಡು ಅವರಿಗೆ ಪರ್ಮಿಷನ್ ಗ್ರಾಂಟ್ ಮಾಡಿದಿರಿ. ಈ ಎಲ್ಲಾ ಅಂಶಗಳು ಇರುವುದರಿಂದ, ಇಂಡಸ್ಟ್ರಿಯಲ್ ಏರಿಯಾದಲ್ಲಿ ಇರುವ ವಾಸದ ಮನೆಯನ್ನು ನೀವು ಅಕ್ವೈರ್ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಕಾನೂನಿನ ತೊಡಕುಗಳು ಬರತಕ್ಕಂಥ ವಿಚಾರಗಳು ಇವೆ. ಉದಾರಣೆಗೆ ಹೇಳುವುದಾದರೆ, ಮೈಸೂರಿನಲ್ಲಿ ಸುಮಾರು ಎರಡು ಸಾವಿರ ಎಕರೆ ಭೂಮಿಯನ್ನು ತಾವು ಅಕ್ವೈರ್ ಮಾಡಿಕೊಂಡಿದ್ದೀರಿ. ಕಳೆದ ಹತ್ತು ವರ್ಷಗಳ ಕಾಲದಿಂದಲೂ ಅಲ್ಲಿ ಕೇವಲ ನಾನೂರು ಎಕರೆಯಿಂದ ನಾನೂರ ಐವತ್ತು ಎಕರೆ ಭೂಮಿ ಕೂಡ ತಾವು ಅಕ್ವೈರ್ ಮಾಡಿಕೊಂಡಂಥ ಉದ್ದೇಶಕ್ಕೆ ಬಳಸದೇ ಹಾಗೇ ಬಿಟ್ಟಿದ್ದೀರಿ. ತಾವು ಯಾರ್ಯಾರಿಗೆ ನೂರಾರು ಎಕರೆ ಭೂಮಿಯನ್ನು ಅಲಾಟ್ ಮಾಡಿದಿರೋ ಅವರು ಆ ಭೂಮಿಯನ್ನು ಬ್ಯಾಂಕ್‌ನಲ್ಲೋ ಅಥವಾ ಮತ್ತೊಂದಕ್ಕೆ ಕೊಲ್ಯಾಟರಲ್ ಸೆಕ್ಯೂರಿಟಿ ಕೊಟ್ಟು ಸಾಲ ಪಡೆದಿರುವಂತಹ ವ್ಯವಸ್ಥೆ ಇದೆ. ಇಲ್ಲಿ ತಾವು ಋಣಮುಕ್ತ ಮಾಡುವಂತಹ ವಿಚಾರವನ್ನು ಕೂಡ ಪ್ರಸ್ತಾಪಿಸಿದ್ದೀರಿ. ಇದಕ್ಕೆ ಸಂಬಂಧಪಟ್ಟ ಭೂಮಿಯನ್ನು ಇನ್ನೊಂದು ಕಡೆ ಅಡಮಾನ ಮಾಡಿದಂತಹ ಸಂದರ್ಭದಲ್ಲಿ ಅದನ್ನು ಋಣಮುಕ್ತ ಮಾಡದೇ ಅದನ್ನು ಅಕ್ವೈರ್ ಮಾಡುವುದಕ್ಕೆ ಯಾವುದರಲ್ಲೂ ಕೂಡ ಪ್ರಾವಿಷನ್ ಸಿಕ್ಕುವುದಿಲ್ಲ. ಪ್ರಮುಖವಾದ ವಿಚಾರ ಏನೆಂದರೆ, ತಾವು ಈ ವಿಧೇಯಕವನ್ನು ಮಂಡಿಸುವುದಕ್ಕಿಂತಲೂ ಮುಂಚೆ ಈ ಸದನಕ್ಕೆ ಇಲ್ಲಿಯವರೆವಿಗೂ ಎರಡು ವರ್ಷಗಳ ಕಾಲದಲ್ಲಿ ಉಪಯೋಗ ಮಾಡುವುದಕ್ಕೆ ಆಗದೇ ಇರುವಂತಹ ಇಂಡಸ್ಟ್ರಿಯಲ್ ಪ್ರದೇಶಗಳು ಎಷ್ಟು ಇವೆ ಎನ್ನುವುದನ್ನು ಹೇಳಬೇಕಾಗುತ್ತದೆ. ಇವತ್ತಿನವರೆಗೆ ಈ ರೀತಿ ಎಷ್ಟು ಷೆಡ್ಡುಗಳನ್ನು ವಾಪಸ್ ತೆಗೆದುಕೊಂಡಿದ್ದೀರಿ? ರೀ-ಅಲಾಟ್‌ಮೆಂಟ್‌ಗೆ ಏನು ವ್ಯವಸ್ಥೆಯನ್ನು ಮಾಡಿದ್ದೀರಿ? ಈ ಎಲ್ಲಾ ಅಂಶಗಳನ್ನು ಈ ಸದನದ ಮುಂದೆ ಇಟ್ಟರೆ ಈ ಒಂದು ತಿದ್ದುಪಡಿಗೆ ಅವಕಾಶ ಮಾಡಿಕೊಡುವುದಕ್ಕೆ ಸರಿ ಹೋಗುತ್ತದೆಂದು ನನಗನ್ನಿಸುತ್ತದೆ. ಇದರ ಉದ್ದೇಶ ಒಳ್ಳೆಯದು ಇದ್ದರೂ ಕೂಡ ಇದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡುವಂತಹ

ಅವಶ್ಯಕತೆ ಇರುವುದರಿಂದ ಅಂಥ ಮಾಹಿತಿಯನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ವಿಶೇಷನಾಗಿ ಮಾನ್ಯ ಕೈಗಾರಿಕೆ ಸಚಿವರು ಸುಮಾರು ಆರು ವರ್ಷಗಳ ಕಾಲ ಇಲ್ಲಿಯೇ ಇದ್ದವರು, ಅವರು ಈ ವಿಧೇಯಕವನ್ನು ಮಂಡನೆ ಮಾಡುವಂತಹ ಕಾಲದಲ್ಲಿ ಇಲ್ಲಿ ಇದ್ದರೆ ಬಹಳ ಔಚಿತ್ಯ ಇರುತ್ತಿತ್ತು. ಏಕೆಂದರೆ, ನಾವು ಹೇಳುವಂತಹ ವಿಚಾರಗಳಿಗೆ ಅವರು ನಮಗೆ ಸಮಧಾನವಾಗುವಂತಹ ಉತ್ತರ ಕೊಟ್ಟಿದ್ದರೆ, ನಾವು ಕೊಡು ಈ ವಿಧೇಯಕಕ್ಕೆ ವಿರೋಧ ವ್ಯಕ್ತಪಡಿಸುತ್ತಿರಲಿಲ್ಲ. ಆದ್ದರಿಂದ, ಈ ಬಗ್ಗೆ ನಮಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇರುವುದರಿಂದ ಮಾನ್ಯ ಸಚಿವರು ಸದನಕ್ಕೆ ಬಂದು ನಮಗೆ ಉತ್ತರ ಕೊಡುವಂತೆ ತಾವು ಅಪ್ರೈಸ್ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ದೇಶಪಾಂಡೆಯವರು ಈ ಸದನದಲ್ಲಿ ಇದ್ದರೆ ಅವರ ಹತ್ತಿರ ಈ ವಿಷಯದ ಬಗ್ಗೆ ಪುನಃ ಪ್ರಸ್ತಾಪಿಸಬಹುದಾಗಿತ್ತು. ಹಿಂದೆ ನಮ್ಮ ಸರ್ಕಾರದಲ್ಲಿ ಅವರು ಕೈಗಾರಿಕಾ ಸಚಿವರಾಗಿದ್ದಾಗ ಅವರು ಒಂದು ಮಾತನ್ನು ಹೇಳಿದ್ದರು. ದೊಡ್ಡ ದೊಡ್ಡ ಉದ್ದಿಮೆಗಳು ಬರುವಾಗ ಲ್ಯಾಂಡ್ ಆಡಿಟ್ ಅನ್ನು ಮಾಡಿಸುತ್ತೇನೆಂದು ಹೇಳಿದ್ದರು. ಯಾವ ಉದ್ದಿಮೆಗೆ ಎಷ್ಟು ಲ್ಯಾಂಡ್ ಬೇಕು ಎನ್ನುವುದನ್ನು ಆಡಿಟ್ ಮಾಡಿ ಅವರಿಗೆ ಅಷ್ಟೇ ಭೂಮಿಯನ್ನು ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇನೆಂದು ಹೇಳಿದರು. ಇವತ್ತು ಇಂಥ ಕಾರ್ಯಕ್ರಮ ಅವರು ಹಾಕಿಕೊಂಡಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆಯವರು ಬಂದು ಇಲ್ಲಿ ಉತ್ತರ ಹೇಳಬೇಕೆಂದರೆ ನನಗೇನು ಅಭ್ಯಂತರ ಇಲ್ಲ, ತಾವು ಬೇಕಾದರೆ ಮಂಗಳವಾರ ಈ ವಿಷಯವನ್ನು ತೆಗೆದುಕೊಳ್ಳಿ. ಆದರೆ ಇದನ್ನು ತಾವು 1998ರ ಸಚಿವ ಸಂಪುಟದಲ್ಲಿ ಅಪ್ರೂವಲ್ ತೆಗೆದುಕೊಂಡು, ನಂತರ 1999ರಲ್ಲಿ ನೋಟಿಫಿಕೇಷನ್ ಕೊಟ್ಟು ಬಿಲ್ ಅನ್ನು ತಯಾರು ಮಾಡಿದ್ದೀರಿ. ತಾವು ಆಗ ಏನು ಮಾಡಿದ್ದೀರಿ ಅದನ್ನೇ ತಂದು ನಾವು ಈಗ ಈ ಸದನದಲ್ಲಿ ಇಟ್ಟಿದ್ದೇವೆ. ಇದರಲ್ಲಿ ಉಪಯುಕ್ತವಾದ ಅಂಶ ಏನೆಂದರೆ, ಇವತ್ತು ಯಾರು ಇಂಡಸ್ಟ್ರಿಯಲ್ ಸೈಟ್ ಕೇಳುತ್ತಾರೆ ಅವರಿಗೆ ಆ ಸೈಟ್ ಸಿಕ್ಕುವುದಿಲ್ಲ. ಮಾನ್ಯ ಭೈರೇಗೌಡರವರು ಹೇಳಿದ ಹಾಗೆ ಕೆಲವು ಜನ ಹತ್ತಾರು ವರ್ಷಗಳಿಂದ ಅದಕ್ಕೆ ಸ್ಪೆಕ್ಯುಲೇಷನ್, ಹೆಚ್ಚಿಗೆ ಹಣ ಸಿಗುತ್ತದೆಂದು ತಿಳಿದುಕೊಂಡು, ಸುಮ್ಮನೆ ಒಂದು ಅಲಾಟ್ ಮಾಡಿಕೊಂಡು ಇಟ್ಟುಕೊಳ್ಳೋಣ ಎಂದು, ಯಾರ ಹತ್ತಿರ ದುಡ್ಡು ಇರುತ್ತದೆ ಅವರು ಈ ರೀತಿ ಅಲಾಟ್ ಮಾಡಿಕೊಂಡವರು ಇದ್ದಾರೆ. ಅದನ್ನು ನೀವು ಯಾವ ರೀತಿ ಮಾಡಿದ್ದೀರೋ ಅದನ್ನೇ ನಾವು ಒಪ್ಪಿಕೊಂಡು ಇಲ್ಲಿ ತಂದಿದ್ದೇವೆ. ಇದೂ ಕೂಡ ಕೂಲಂಕಷವಾಗಿ ಚರ್ಚೆ ಮಾಡಿ ನಂತರ ತಿದ್ದುಪಡಿ ಮಾಡಿರತಕ್ಕಂಥದ್ದು ಇದೆ. ಇದು ಒಂದು ಸಣ್ಣ ತಿದ್ದುಪಡಿ, ಇದಕ್ಕೇನು ಬಹಳ ಆಳವಾಗಿ ಚರ್ಚೆ ಮಾಡುತಕ್ಕಂಥದಿಲ್ಲ, ಸೆಕ್ಷನ್ 25 Public Premises Eviction Act ನಲ್ಲಿರುವಂತೆ ಮಾಡಬೇಕಾದರೆ ಲೆಂಥಿ ಪ್ರೊಸೀಜರ್ ಆಗುತ್ತದೆ. ಅದಕ್ಕಾಗಿ ಇದರಲ್ಲಿ ಒಂದು ತಿದ್ದುಪಡಿ ಮಾಡಿಕೊಂಡು Suo motto eviction ಮಾಡಿಕೊಂಡು, ಪುನಃ ಬೇಕಾದಂಥ needy peopleಗೆ ಇದನ್ನು ಅಲಾಟ್‌ಮೆಂಟ್ ಮಾಡಬೇಕು ಎನ್ನುವುದರ ಬಗ್ಗೆ ಮಾತ್ರ ಇದೆ. ಇದರಲ್ಲಿ ಬೇರೆ ಯಾವ ಉದ್ದೇಶವೂ ಇಲ್ಲ, ಅದಕ್ಕಾಗಿ ಇಷ್ಟೊಂದು ಥೀರ್ಫ್ ಚರ್ಚೆ

ಅನಾವಶ್ಯಕವೆಂದು ನಾನು ತಿಳಿದುಕೊಂಡಿದ್ದೇನೆ. ಹಾಗೆ ಚರ್ಚೆಯ ಅವಶ್ಯಕತೆ ಇದೆ ಎಂದು ತಾವು ಹೇಳುವುದಾದರೆ ಇದನ್ನು ಮುಂದಕ್ಕೆ ಹಾಕಿ, ನನಗೇನೂ ತೊಂದರೆಯಿಲ್ಲ.

ಶ್ರೀ ಎ. ರಾಮದಾಸ್ : ಮುಂದಕ್ಕೆ ಹಾಕಬೇಕು ಎನ್ನುವ ಅಭಿಪ್ರಾಯ ನಮ್ಮದಲ್ಲ. ಕೊನೇ ಪಕ್ಷ ನಮಗೆ ಮಾಹಿತಿಯನ್ನು ಕೊಡತಕ್ಕಂಥ ವ್ಯವಸ್ಥೆಯಾಗ ಬೇಕು. ಏಕೆಂದರೆ, ಸಚಿವರಿಗೆ ಗೊತ್ತಿರುವಂತೆ ಯಾವುದೇ ಆಕ್ಟ್ ಬಂದರೂ ಕೂಡ ಅಲ್ಲಿ ಪ್ರಾಸ್ಪೆಕ್ಟಿವ್ ಎಫೆಕ್ಟ್ ಇರಬೇಕು ಎಂದು ಹೇಳುತ್ತದೆ. ಆದರೆ ಇಲ್ಲಿ ಹೇಳಿರುವಂತಹ ಉದ್ದೇಶ ಏನೆಂದರೆ, ಈಗಾಗಲೇ ಹಿಂದೆ ಯಾರ್ಯಾರು ಇದ್ದಾರೆ ಅದನ್ನೆಲ್ಲಾ ಎವಿಕ್ಷನ್ ಮಾಡಿಸುವುದಕೋಸ್ಕರ ನಮಗೆ ಸಹಾಯವಾಗುತ್ತದೆಂದು ಹೇಳುತ್ತೀರಿ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ if it is a prospective, retrospective effect ಹೇಗೆ ಕೊಡಬೇಕು ಎನ್ನುವುದರ ಬಗ್ಗೆ ನಮಗೆಲ್ಲರಿಗೂ ಅಪ್ರೈಸ್ ಮಾಡಬೇಕಲ್ಲವೇ? Unless it is done, how can we say for that ಏಕೆಂದರೆ, ಈ ಬಗ್ಗೆ ಸುಪ್ರಿಂ ಕೋರ್ಟ್ ಜಡ್ಜ್‌ಮೆಂಟ್ ಆಗಿದೆ. ನಿಮ್ಮ ಆಕ್ಟ್ ಆದ ಮೇಲೆ ಪ್ರಾಸ್ಪೆಕ್ಟಿವ್ ಎಫೆಕ್ಟ್ ಇರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ರೂಲ್ಸ್ ಪ್ರಕಾರ ರೆಗ್ಯುಲರೈಜ್ ಮಾಡಿಸಿಕೊಂಡವರಿಗೆ This question doesn't arise. ರೂಲ್ಸ್ ಅನ್ನು ವೈಯೋಲೇಟ್ ಮಾಡಿದಾಗ, ಉದಾಹರಣೆಗೆ ತಾವು ಹೇಳಿದ ಹಾಗೆ ಕೆಲವು ಜನ ಕನ್‌ವರ್ಟ್ ಮಾಡಿಕೊಂಡಿರಬಹುದು. But with the permission of the Government. So, that won't come under violation. Any violation is made under the KIADB Act, such things only will come.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಇಂಥ ವಿಧೇಯಕ ಬಂದಂಥ ಸಂದರ್ಭದಲ್ಲಿ ನಾವು ನಮಗೆ ತಿಳಿದ ಕೆಲವು ಸಲಹೆಗಳನ್ನು ಕೊಡಬಹುದೇ ವಿನಃ ಬೇರೆ ಸಮಯದಲ್ಲಿ ಯಾವ ಮಂತ್ರಿಗಳು ನಮ್ಮನ್ನು ಕರೆದು ಸಲಹೆಯನ್ನು ಪಡೆಯುವುದಿಲ್ಲ. ಇಂಥ ಸನ್ನಿವೇಶಗಳಲ್ಲಿ ನಾವು ಕೆಲವು ಸಲಹೆಗಳನ್ನು ಕೊಟ್ಟಾಗ ಮುಂದೆ ಇಂಥ ಒಂದು ತಿದ್ದುಪಡಿ ತರುವಂಥ ಸಂದರ್ಭದಲ್ಲಿ ಪ್ರಾಯಶಃ ಅವರು ಇದನ್ನೆಲ್ಲಾ ಸೇರಿಸುವುದಕ್ಕೆ ಸಾಧ್ಯವಾಗುತ್ತದೆ. ಆದಕೋಸ್ಕರ ಕೈಗಾರಿಕಾ ಸಚಿವರಾದ ಮಾನ್ಯ ದೇಶಪಾಂಡೆಯವರು ಈ ಸಂದರ್ಭದಲ್ಲಿ ಸದನದಲ್ಲಿ ಇದಿದ್ದರೆ ಚೆನ್ನಾಗಿರುತ್ತಿತ್ತು. ಮತ್ತೊಂದು ಸಲಹೆ ಏನೆಂದರೆ, ರೈತರಿಂದ ಭೂಮಿಯನ್ನು ಸರ್ಕಾರ ತೆಗೆದುಕೊಂಡು ಬೇರೆಯವರಿಗೆ ಅಲಾಟ್ ಮಾಡುವುದಕ್ಕಿಂತ, ಉದ್ದಿಮೆದಾರರಿಂದ ನೇರವಾಗಿ ರೈತರಿಗೆ ಹಣವನ್ನು ಕೊಡಿಸಿರತಕ್ಕಂಥ ವ್ಯವಸ್ಥೆಯಾಗಬೇಕು. ಮಾರುಕಟ್ಟೆಯಲ್ಲಿ ಏನು ಬೆಲೆ ಇರುತ್ತದೆ ಅದೇ ಬೆಲೆ ರೈತರಿಗೆ ನೇರವಾಗಿ ಉದ್ದಿಮೆದಾರರಿಂದ ಸಿಗುವಂತಹ ವ್ಯವಸ್ಥೆ ಆಗಬೇಕು. ರೈತನ ಭೂಮಿಗೆ ಆ ದಿನದ ಮಾರುಕಟ್ಟೆಯ ಬೆಲೆಯನ್ನು ಕೊಡತಕ್ಕಂಥ ವ್ಯವಸ್ಥೆ ಆಗಬೇಕು. ಇವತ್ತಿನ ದಿವಸ ಸರ್ಕಾರ ಆತನಿಂದ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಆತನಿಗೆ ಇದರಿಂದ ಸಿಗತಕ್ಕಂಥಹ ಹಣ ಬಹಳ ಕಡಿಮೆ. ಆದರೆ ಉದ್ದಿಮೆದಾರ ಜಾಸ್ತಿ ಹಣ ಕೊಟ್ಟು ತೆಗೆದುಕೊಳ್ಳುತ್ತಾನೆ. ಆದ್ದರಿಂದ, ನೇರವಾಗಿ ಇಂಥ ಜಮೀನನ್ನು ಇಂಥ ರೈತನಿಂದಲೇ ಪಡೆದುಕೊಳ್ಳಬೇಕೆಂಬ ವ್ಯವಸ್ಥೆಯಾದರೆ ನಿಜವಾಗಿಯೂ ರೈತನಿಗೆ ಮಾರುಕಟ್ಟೆ

ಬೆಲೆ ಸಿಗುತ್ತದೆ. ರೈತನಿಂದ ಭೂಮಿಯನ್ನು ಕಸಿದುಕೊಂಡು ಇನ್ನೊಬ್ಬನಿಗೆ ಕೊಡತಕ್ಕಂಥ ಸಂದರ್ಭದಲ್ಲಿ ಇವತ್ತಿನ ದಿವಸ ಸರ್ಕಾರದ ಅಧಿಕಾರದಲ್ಲಿದ್ದವರು ವ್ಯವಾಹಾರ ಮಾಡಿಕೊಂಡು ತಮಗೆ ಬೇಕಾದ ಜಾಗವನ್ನು ಇಟ್ಟುಕೊಳ್ಳುತ್ತಾರೆ. ಇದನ್ನು ಈಗಾಗಲೇ ನಮ್ಮ ಶಾಸಕ ಮಿತ್ರರು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಆದ್ದರಿಂದ ಇದರ ಬಗ್ಗೆ ತನಿಖೆ ಆಗಬೇಕು. ಹಾಗೆಯೇ ರೈತನಿಂದ ತೆಗೆದುಕೊಂಡಂಥ ಜಮೀನನ್ನು ಬೇನಾಮಿ ಹೆಸರಿನಲ್ಲಿ ಇಟ್ಟುಕೊಂಡಿರುತ್ತಾರೆ, ಆದ್ದರಿಂದ ಇಂಥವುಗಳನ್ನು ಸರ್ಕಾರ ತನಿಖೆ ಮಾಡಬೇಕಾಗುತ್ತದೆ. ನಾನು ಈ ಅಮೆಂಡ್‌ಮೆಂಟನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂಬುದರ ಬಗ್ಗೆ ತನಿಖೆ ಮಾಡಬೇಕೆಂದು ಹೇಳುತ್ತಾ ಲ್ಯಾಂಡ್ ಆಡಿಟಿಂಗ್ ಮಾಡಿಸಿ ಲ್ಯಾಂಡ್ ಅಲಾಟ್‌ಮೆಂಟ್ ಮಾಡಬೇಕೆಂದು ತಮ್ಮ ಮುಖೇನ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಸಿ. ತಮ್ಮಣ್ಣ (ಕಿರುಗಾವಲು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಜಮೀನನ್ನು ಅಲಾಟ್ ಮಾಡಿ ರಿಜಂಪ್‌ಶನ್ ಮಾಡಿರುವ ಬಗ್ಗೆ ಚರ್ಚೆ ನಡೆದಿದೆ. ನಾನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಒಬ್ಬ ಅಧಿಕಾರಿಯಾಗಿ ಕೆಲಸ ಮಾಡಿದ್ದು, ಈಗ ರಾಜಕಾರಣಿಯಾಗಿ ಇಲ್ಲಿಗೆ ಬಂದಿದ್ದೇನೆ. ಇವತ್ತಿನ ದಿವಸ ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಅಮೆಂಡ್‌ಮೆಂಟ್ ಏನಿದೆ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಅಲಾಟ್ ಆದಂಥ ಲ್ಯಾಂಡನ್ನು ಎರಡು ವರ್ಷಗಳಲ್ಲಿ ಆ ಅಲಾಟಿ ಉಪಯೋಗ ಮಾಡದೇ ಇದ್ದರೆ ಅದನ್ನು ವಾಪಸ್ಸು ಪಡೆದುಕೊಂಡು ಬೇರೆ ಅಲಾಟಿಗೆ ಕೊಡತಕ್ಕಂಥ ಕಾರ್ಯಕ್ರಮ ಮೊದಲಿನಿಂದಲೂ ಇದೆ. ಇವತ್ತಿನ ದಿವಸ ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಗಳನ್ನು ಮಾಡಬೇಕಾದರೆ, ಮುಂದಿನ 5 ರಿಂದ 10 ವರ್ಷಗಳಲ್ಲಿ ಯಾವ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಬೇಕೆಂಬುದರ ಬಗ್ಗೆ ಯೋಜನೆ ಮಾಡಿ ಮತ್ತು ಯಾವ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶಗಳನ್ನು ಮಾಡಬೇಕೆಂಬುದರ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳುತ್ತದೆ. ನಂತರ ಇದನ್ನು ಅಭಿವೃದ್ಧಿಪಡಿಸುವ ದೃಷ್ಟಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಈ ತೀರ್ಮಾನವನ್ನು ಏಕಾಏಕಿ ಮಂಡಳಿಯು ತೆಗೆದುಕೊಳ್ಳುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು 70 ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿದೆ. ರಾಷ್ಟ್ರ ಮಟ್ಟದಲ್ಲಿ ಖ್ಯಾತಿಗೊಳಿಸುವ ರೀತಿಯಲ್ಲಿ ಸದರಿ ಕೈಗಾರಿಕಾ ಪ್ರದೇಶಗಳನ್ನು ಇವತ್ತು ಅಭಿವೃದ್ಧಿಪಡಿಸಿವೆ. ಸಾವಿರಾರು ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಂಡು ಇದುವರಿವಿಗೂ ಹಾಗೆಯೇ ಇಟ್ಟುಕೊಂಡು ಯಾರಿಗೂ ಅಲಾಟ್ ಮಾಡಿಲ್ಲವೆಂದು ಮಾನ್ಯ ಬಚ್ಚೇಗೌಡರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ನಿಜವಾಗಿಯೂ ಅವರ ಭಾವನೆ ತಪ್ಪು. ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು 40 ಸಾವಿರ ಎಕರೆಗಳಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡು ಕೈಗಾರಿಕಾ ಪ್ರದೇಶಗಳನ್ನಾಗಿ ಈಗಾಗಲೇ ಅಭಿವೃದ್ಧಿಪಡಿಸಿದೆ. ಇದರಲ್ಲಿ ಕೇವಲ ಮೂರು ಅಥವಾ ನಾಲ್ಕು ಸಾವಿರ ಎಕರೆ ಜಮೀನು ಹಾಗೆಯೇ ಉಳಿದಿರಬಹುದು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಬಚ್ಚೆ ಗೌಡರ ಪ್ರಶ್ನೆಗೆ ಮಾನ್ಯ ಕೈಗಾರಿಕಾ

ಸಚಿವರು ಮಾತ್ರ ಉತ್ತರ ಹೇಳಬೇಕಾಗುತ್ತದೆ. ಆದ್ದರಿಂದ, ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಮಾತ್ರ ಇಲ್ಲಿ ಹೇಳಬೇಕೆಂದು ವಿನಂತಿ.

ಶ್ರೀ ಡಿ.ಸಿ. ತಮ್ಮಣ್ಣ : ಕೇಂದ್ರ ಸರ್ಕಾರದ ನೆರವಿನಿಂದ ರಾಜ್ಯದಲ್ಲಿ ಮೂರು ಕೈಗಾರಿಕಾ ಬೆಳವಣಿಗೆ ಕೇಂದ್ರಗಳನ್ನು ಸ್ಥಾಪಿಸಬೇಕೆಂದು, ಕರ್ನಾಟಕ ರಾಜ್ಯದಲ್ಲಿ ಹಾಸನ ಮತ್ತು ಧಾರವಾಡ ಹಾಗೂ ರಾಯಚೂರಿನಲ್ಲಿ ಈ ಕೇಂದ್ರಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಅಭಿವೃದ್ಧಿಪಡಿಸಿದೆ. ಇದರಲ್ಲಿ ಧಾರವಾಡದಲ್ಲಿ ಈಗಾಗಲೇ 75 ಪರ್ಸೆಂಟ್ ನಷ್ಟು ಕೈಗಾರಿಕೆಗಳು ಬಂದಿವೆ. ಆದರೆ ಹಾಸನದಲ್ಲಿ ನಾವು ನಿರೀಕ್ಷೆ ಮಾಡಿದಷ್ಟು ಬೆಳೆವಣಿಗೆ ಆಗಿಲ್ಲ.

ಅಧ್ಯಕ್ಷರು : ಈಗ ನಮ್ಮ ಮುಂದಿರುವ ಬಿಲ್‌ಗೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಿ. ಕೈಗಾರಿಕೆ ಬೆಳವಣಿಗೆ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಅದನ್ನು ಪ್ರಸ್ತಾಪ ಮಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕರ್ನಾಟಕ ಕೈಗಾರಿಕಾ ಪ್ರದೇಶದ ಅಭಿವೃದ್ಧಿ ಮಂಡಳಿಯಲ್ಲಿ ಒಬ್ಬ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಆದ್ದರಿಂದ, ಯಾವುದೇ ವಿಧೇಯಕದ ಮೇಲೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಅವರ ಭಾವನೆಯನ್ನು ಹೇಳುವುದಕ್ಕೆ. ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಬೇಗ ಮುಗಿಸುವುದಕ್ಕೆ ಅಂಥ ಅವಸರವೇನೂ ಇಲ್ಲ.

ಶ್ರೀ ಡಿ.ಸಿ. ತಮ್ಮಣ್ಣ : ಮೂಲಭೂತವಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಸ್ವಾಧೀನ ಪಡಿಸಿಕೊಂಡಿರುವ ಜಮೀನಿನ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಶ್ನೆ ಮಾಡುತ್ತಿದ್ದಾರೆ. ಕರ್ನಾಟಕ ಇಡೀ ಭಾರತದಲ್ಲಿಯೇ ಕೈಗಾರಿಕಾ ವಲಯದಲ್ಲಿ ಹೆಸರುವಾಸಿಯಾದ ರಾಜ್ಯವಾಗಿದೆ. "Industrialise or perish." ಎಂದು ದಿವಂಗತ ಶ್ರೀ ವಿಶ್ವೇಶ್ವರಯ್ಯನವರು ಹೇಳಿದ್ದರು. ನಮ್ಮ ರಾಜ್ಯ ಕೈಗಾರಿಕಾ ವಲಯದಲ್ಲಿ ಪ್ರಥಮ ಸ್ಥಾನದಲ್ಲಿದ್ದದ್ದು ಇವತ್ತಿನ ದಿವಸ ಆ ಸ್ಥಾನವನ್ನು ಕಳೆದುಕೊಂಡಿದೆ. ಏಕೆಂದರೆ ನಮ್ಮ ರಾಜ್ಯದಲ್ಲಿ ಯಾವ ರೀತಿಯಾಗಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಮಾಡಬೇಕಾಗಿತ್ತೋ, ಆ ರೀತಿಯಲ್ಲಿ ಅದನ್ನು ಅಭಿವೃದ್ಧಿ ಮಾಡದೇ ಇರುವುದರಿಂದ ನಾವು ಇನ್ನೂ ಮುಂದೆ ಹೋಗಿಲ್ಲ. ಇವತ್ತಿನ ದಿವಸ ಮಹಾರಾಷ್ಟ್ರ ರಾಜ್ಯದಲ್ಲಿರತಕ್ಕಂಥ ಔರಂಗಬಾದನ್ನು ನಾವು ತೆಗೆದುಕೊಂಡರೆ, ಇದು ಗುಲ್ಬರ್ಗಾಕ್ಕಿಂತ ಬೆಂಗಾಡು ಪ್ರದೇಶವಾಗಿದ್ದು, ಇಲ್ಲಿ 15 ಸಾವಿರ ಎಕರೆ ಪ್ರದೇಶವನ್ನು ಭೂಸ್ವಾಧೀನ ಮಾಡಿಕೊಂಡು ಕೈಗಾರಿಕಾ ವಲಯದಲ್ಲಿ ಮುಂಬಾಯಿ ಬಿಟ್ಟರೆ ಎರಡನೆಯದಾಗಿ ಔರಂಗಬಾದ್ ಬಹಳ ಮುಂದಿದೆ ಇವತ್ತಿನ ದಿವಸ ಕೈಗಾರಿಕೆಗಳಿಲ್ಲದೆ, ರಾಜ್ಯ ಮತ್ತು ರಾಷ್ಟ್ರ ಮುಂದುವರೆಯುವುದಕ್ಕೆ ಅಥವಾ ಬೆಳವಣಿಗೆಯಾವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಅನಾವಶ್ಯಕವಾಗಿ ಭೂಮಿಯನ್ನು ಸ್ವಾಧೀನ ಮಾಡಿಕೊಂಡಿದೆ ಎಂಬ ವಾದವನ್ನು ಈ ಸದನದ ಸದಸ್ಯನಾಗಿರುವ ನಾನು ಒಪ್ಪುವುದಿಲ್ಲ. ಇದು ಕೆಲವು ಸದಸ್ಯರ ಅಭಿಪ್ರಾಯವಿರಬಹುದು. ನಾನು ಅದೇ ಮಂಡಳಿಯಲ್ಲಿ ಕೆಲಸ ಮಾಡಿದವನಾಗಿ ಆ ಅಭಿಪ್ರಾಯವನ್ನು ಒಪ್ಪುವುದಿಲ್ಲವೆಂದು ಈ ಸಭೆಯ ಗಮನಕ್ಕೆ ತರುವುದಕ್ಕೆ

ಇಷ್ಟಪಡುತ್ತೇನೆ. ಅಲಾಟ್‌ಮೆಂಟ್ ಆದಂಥ ಲ್ಯಾಂಡ್‌ನಲ್ಲಿ ಎರಡು ವರ್ಷದೊಳಗೆ ಅಲಾಟಿ ಕೈಗಾರಿಕೆಯನ್ನು ಪ್ರಾರಂಭ ಮಾಡದೇ ಇದ್ದ ಪಕ್ಷದಲ್ಲಿ ಎರಡು ವರ್ಷದ ನಂತರ ಅದನ್ನು ಸ್ವಾಧೀನಪಡಿಸಿಕೊಳ್ಳುವಂಥದ್ದು ನಿಜವಾಗಿಯೂ ಕೂಡ ಸ್ವಾಗತಾರ್ಹವಾದ ವಿಚಾರ. ಏಕೆಂದರೆ ಕೈಗಾರಿಕೆ ಪ್ರಾರಂಭ ಮಾಡುತ್ತೇವೆಂದು ಮುಂದೆ ಬರುವವರಿಗೆ ಮಂಡಳಿಯು ಇಂಥ ಜಾಗವನ್ನು ಕೊಡುತ್ತದೆ, ಇದನ್ನು ಮಂಡಳಿಯಲ್ಲಿಯೇ ಇಟ್ಟುಕೊಳ್ಳುವುದಿಲ್ಲ. ಅಲಾಟಿಗಳು ಕೈಗಾರಿಕೆಯನ್ನು ಪ್ರಾರಂಭ ಮಾಡದೇ ಇದ್ದ ಪಕ್ಷದಲ್ಲಿ ಇದನ್ನು ಮತ್ತೆ ವಾಪಸ್ಸು ತೆಗೆದುಕೊಳ್ಳತಕ್ಕಂಥ ಅಧಿಕಾರ ಮಂಡಳಿಗೆ ಇರಲೇಬೇಕು. ಇಲ್ಲದಿದ್ದರೆ 10 ವರ್ಷಗಳವರೆಗೆ ಇಟ್ಟುಕೊಂಡು ಸ್ಪೆಕ್ಯುಲೇಶನ್ ಮಾಡುತ್ತಾರೆ. ಇದರಿಂದ ಕೈಗಾರಿಕೆ ಮಾಡುವಂಥವರಿಗೆ ಲ್ಯಾಂಡ್ ಸಿಗುವಂಥ ವ್ಯವಸ್ಥೆ ಆಗುತ್ತದೆ. ಅದ್ದರಿಂದ ಈ ಅಮೆಂಡ್‌ಮೆಂಟನ್ನು ಪಾಸ್ ಮಾಡುವುದು ಸೂಕ್ತವೆಂದು ನನ್ನ ಅಭಿಪ್ರಾಯ.

+ ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಅಧ್ಯಕ್ಷರೆ, ಬಹಳ ಒಳ್ಳೆಯ ತಿದ್ದುಪಡಿಯನ್ನು ಇಲ್ಲಿ ತಂದಿದ್ದಾರೆ. ಆದರೆ ಇದರ ಬಗ್ಗೆ ಅಂಕಿ-ಅಂಶಗಳನ್ನು ಮತ್ತು ಇದರಿಂದ ಜನರಿಗೆ ಯಾವರೀತಿ ತೊಂದರೆಯಾಗುತ್ತದೆ ಎಂಬುದನ್ನು ಹಾಗೂ ಇದನ್ನು ತರಬೇಕಾಗಿರತಕ್ಕಂಥ ಮುಖ್ಯ ಉದ್ದೇಶ ಏನು ಎನ್ನುವುದರ ಬಗ್ಗೆ ಮಾನ್ಯ ದೇಶಪಾಂಡೆಯವರು ಉತ್ತರ ಹೇಳಿದರೆ ಚೆನ್ನಾಗಿರುತ್ತದೆ. ಜಿಗಣೆ ಕೈಗಾರಿಕಾ ಪ್ರದೇಶದಲ್ಲಿ ಬೇನಾಮಿ ಹೆಸರಿನಲ್ಲಿ ಬೇಕಾದಷ್ಟು ವ್ಯವಹಾರಗಳಾಗಿವೆ. ಇದನ್ನು ನಾನು ಖುದ್ದಾಗಿ ನೋಡಿದ್ದೇನೆ. ಇಲ್ಲಿ ಯಾರೋ ಅಲಾಟ್ ಮಾಡಿಸಿಕೊಂಡು ಯಾರಿಗೋ ಮಾರಾಟ ಮಾಡುತ್ತಿದ್ದಾರೆ. ಆದ್ದರಿಂದ, ಇದನ್ನು ತಡೆಗಟ್ಟುವುದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಮತ್ತು ಬೇನಾಮಿ ಪ್ರಕರಣಗಳ ಬಗ್ಗೆ ಮತ್ತು ಕೆಲವು ವಿಷಯಗಳ ಬಗ್ಗೆ ಮಾನ್ಯ ಸಚಿವರು ಇದ್ದಿದ್ದರೆ ಕೇಳಬಹುದಾಗಿತ್ತು. ಇಂಥ ಘಟನೆಗಳು ಪೀಣ್ಯ ಮತ್ತು ಜಿಗಣೆ ಕೈಗಾರಿಕಾ ಪ್ರದೇಶಗಳಲ್ಲಿ ನಡೆದಿವೆ. ರೈತರಿಂದ ಜಮೀನುಗಳನ್ನು ಪಡೆದು ಯಾರೋ ಕೈಗಾರಿಕೆಗಳನ್ನು ಮಾಡಬೇಕೆಂದು ಹೇಳಿ ಬೇನಾಮಿ ಹೆಸರಿನಲ್ಲಿ ಬಹಳಷ್ಟು ಇಂತಹ ಪ್ರಕರಣಗಳು ನಡೆದಿರುವುದನ್ನು ಯಾವರೀತಿಯಲ್ಲಿ ತಡೆಗಟ್ಟುತ್ತೀರಿ? ಇಂಡಸ್ಟ್ರಿಯಲ್ ಏರಿಯಾ ಮಾಡಬೇಕೆಂದು ಹೇಳಿ ಎರಡು ವರ್ಷಗಳ ನಂತರ ಯಾವ ಉದ್ದೇಶದಿಂದ ಇದನ್ನು ಮುಂದೆ ಹಾಕಿಕೊಂಡು ಹೋಗಿದ್ದೀರಿ? ಇದು ಬಹಳ ಮುಖ್ಯವಾದ ವಿಷಯ. ಏಕೆಂದರೆ ಲೋನ್ ತೆಗೆದುಕೊಂಡು ಈ ರೀತಿ ಆದಂಥ ಸಂದರ್ಭದಲ್ಲಿ ಅನೇಕರು ಕೋರ್ಟ್‌ಗೆ ಹೋಗುತ್ತಾರೆ. ಇವತ್ತಿನ ದಿವಸ ಬೆಂಗಳೂರಿನಲ್ಲಿ ಬಿ.ಡಿ.ಎ.ರವರು ಯಾರು ಜಾಗವನ್ನು ಸ್ವಾಧೀನಪಡಿಸಿಕೊಂಡಿದ್ದರು ಅವರಿಗೆ ಹತ್ತು ವರ್ಷಗಳಾದರೂ ಯಾವುದೇ ನೋಟೀಸನ್ನು ಕೊಟ್ಟಿರುವುದಿಲ್ಲ. ಆಗ ಅವರು ಬೇರೆಯವರಿಗೆ ಮಾರಾಟ ಮಾಡುತ್ತಾರೆ. ಆದ್ದರಿಂದ ಇದನ್ನು ತಡೆಗಟ್ಟುವುದಕ್ಕೆ ಏನು ಮಾಡಬೇಕು? ಇಂಥ ಪ್ರಕರಣಗಳು ಇವತ್ತು ಬಹಳಷ್ಟಿವೆ. ಯಾವ ರೀತಿ ಕೈಗಾರಿಕೆಗಳು ಅಭಿವೃದ್ಧಿಯಾಗುತ್ತದೆ, ಇಲ್ಲದಿದರೆ ಏನಾಗುತ್ತದೆ ಎನ್ನತಕ್ಕಂಥ ವಿಚಾರವನ್ನು ಮಾನ್ಯ ಸಚಿವರು ತಿಳಿಸಬೇಕಾಗುತ್ತದೆ, ಏಕೆಂದರೆ ಎರಡು ವರ್ಷಗಳಲ್ಲಿ ಇನ್ನೊಬ್ಬರಿಗೆ ಅಲಾಟ್‌ಮೆಂಟ್ ಮಾಡುವುದಾದರೆ ಮತ್ತು ಯಾವುದೇ ಒಂದು ನೋಟೀಸ್ ಕೊಡದೇ ಇದ್ದರೆ ಅಲಾಟ್ ಮಾಡಬೇಕಾಗುತ್ತದೆ. ಇದನ್ನು ಬಹುಶಃ ನೋಟೀಸ್ ಇಲ್ಲದೆ ಪ್ರಿನ್ಸಿಪಲ್ ಆಫ್ ನ್ಯಾಚುರಲ್ ಜಸ್ಟಿಸ್ ಹೇಗಾಗುತ್ತದೆ? ನೋಟೀಸ್ ಕೊಡದೆ ಪಬ್ಲಿಕ್

ಪ್ರೊಸೀಡಿಂಗ್ಸನ್ನು ತೆಗೆದುಕೊಳ್ಳದೇ ಅವರಿಗೆ ಕೊಡುವುದಾದರೆ ಏನು ಸಾರ್ಥಕ? ಇದಕ್ಕೆಲ್ಲಾ ಒಂದು ಪ್ರೊಸೀಜರ್ ಫಾಲೋ ಮಾಡಬೇಕಲ್ಲವೆ?

ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ) : ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ನಾವು ಹೇಳಬೇಕಾದರೆ, ಈಗಾಗಲೇ ಈ ರಾಜ್ಯದಲ್ಲಿ ನಡೆದಂಥ ಕೆಐಎಡಿಬಿಯ ಅಕ್ವಿಜಿಷನ್ ಇಂಡಿಸ್ಟ್ರಿಯಲ್ ಪರ್‌ಪಸ್ ಸಲುವಾಗಿ ಕೊಟ್ಟಂತಹವು. ಎಷ್ಟೋ ಇಂಡಿಸ್ಟ್ರಿಗಳು ಹೆಸರಿಗೆ ಮಾತ್ರ ಬಂದಿವೆ, ನಮ್ಮ ಕಣ್ಣೆದುರಿನಲ್ಲಿಯೇ ಇದೆ, ಹುಬ್ಬಳ್ಳಿ ಧಾರವಾಡ ಏರಿಯಾದಲ್ಲಿ ಬೇಕಾದರೆ ತೋರಿಸುತ್ತೇನೆ. ಹಾಗೆ ನೂರಾರು, ಸಾವಿರಾರು ಎಕರೆ ಜಮೀನು ಇರುತ್ತದೆ. ಅವರು ಹೆಸರಿಗೆ ಮಾತ್ರ ಇಂಡಸ್ಟ್ರಿಯಲ್, ಪರ್‌ಪಸ್‌ಗೆ ಜಮೀನು ತೆಗೆದುಕೊಂಡು ಅಲ್ಲಿ ಚಿಕ್ಕ ಇಂಡಸ್ಟ್ರಿಗಳನ್ನು ಮಾಡಿ ಈಗ ತಮ್ಮದೇ ಆದಂಥ ಜಾಗವನ್ನು ಬೇರೆಯವರಿಗೆ ಇವತ್ತು ಮಾರಾಟ ಮಾಡತಕ್ಕಂಥಾದ್ದು ನಡೆದಿದೆ. ಹಾಗೆ ನೂರಾರು ಎಕರೆ ಜಮೀನು ಇದೆ. ಇಂತಹವುಗಳು ಸರ್ಕಾರದ ಆಸ್ತಿ. ಯಾವ ಇಂಡಸ್ಟ್ರಿಗಳು ಬರಬೇಕಾಗಿತ್ತು, ಎಷ್ಟು ದೊಡ್ಡ ಇಂಡಸ್ಟ್ರಿಗಳು ಬರಬೇಕಾಗಿತ್ತು, ಎಷ್ಟು ಜಮೀನು ಅವರಿಗೆ ಅವಶ್ಯಕವಾಗಿತ್ತು ಅಷ್ಟು ಮಾತ್ರ ಜಾಗವನ್ನು ಆ ಇಂಡಸ್ಟ್ರಿಗಳವರಿಗೆ ಪೂರೈಸಬೇಕಾಗಿತ್ತು. ಅವರ ಹೆಸರಿನ ಮೇಲೆ ಇವತ್ತು ಹೆಚ್ಚಿನ ಜಮೀನನ್ನು ಅಕ್ವಿಜಿಷನ್ ಮಾಡಿ ಒಂದೂಂದು ಎಕರೆಯ ಮೇಲೆ ಉಪಜೀವನ ಮಾಡತಕ್ಕಂಥ ರೈತರಿಂದ ಜಮೀನನ್ನು ತೆಗೆದುಕೊಂಡು ಆ ರೈತರನ್ನು ಬೀದಿ ಪಾಲು ಮಾಡಿ ಅವತ್ತಿನ ರೇಟ್ ಪ್ರಕಾರ ಅವರಿಗೆ ಹಣವನ್ನು ಕೊಟ್ಟಿದ್ದಾರೆ; ಇವತ್ತು ಆ ನೂರಾರು ಎಕರೆ ಜಮೀನಿನಲ್ಲಿ ಯಾವ ಇಂಡಸ್ಟ್ರಿಗಳು ಕೂಡ ಇರುವುದಿಲ್ಲ. ಅಲ್ಲೂ ಇಂಡಸ್ಟ್ರಿಗಳು ಇಲ್ಲದೇ, ಇವತ್ತು ಆ ಚಿಕ್ಕ ಇಂಡಸ್ಟ್ರಿಗಳನ್ನು ಕೂಡ ಇವತ್ತು ಬಂದು ಮಾಡಿ, ಆ ಜಮೀನನ್ನು ಮಾರಾಟ ಮಾಡುವುದಕ್ಕೆ ನಿಂತಿದ್ದಾರೆ. ಈ ಒಂದು ದೃಷ್ಟಿಯಲ್ಲಿ ಅವರಿಗೆ ಅವಕಾಶವನ್ನು ಮಾಡಿಕೊಟ್ಟಿರುವುದರಿಂದ ಆ ರೈತರನ್ನು ಬೀದಿಪಾಲು ಮಾಡಿದಂತಾಗಿದೆ. ಸರ್ಕಾರ ರೈತರಿಂದ ಜಮೀನನ್ನು ವಶಪಡಿಸಿಕೊಂಡು ಅವರಿಗೆ ಕೊಟ್ಟು, ಅಲ್ಲಿ ಇಂಡಸ್ಟ್ರಿಗಳು ಬರದಿರುವುದರಿಂದ ಅವರಿಗೆ ಉದ್ಯೋಗಾವಕಾಶ ಕೂಡ ದೊರೆಯದೆ, ಮೂಲ ಉದ್ದೇಶ ಕೂಡ ಸಫಲವಾಗಲಿಲ್ಲ ಅಂತಹ ಇಂಡಸ್ಟ್ರಿಗಳು ಅಲ್ಲಿ ಬರದೇ ಇದ್ದರೆ, ಅದರಿಂದ ಸರಿಯಾದ ರೀತಿಯ ಪ್ರಯೋಜನವಾಗದಿದ್ದರೆ, ಅಂತಹ ಜಮೀನನ್ನು ಸರ್ಕಾರ ವಶಪಡಿಸಿಕೊಂಡು, ಆ ಜಮೀನನ್ನು ಹಂಚಿಕೊಡುವುದು ಒಳ್ಳೆಯದು. ಇಲ್ಲದಿದ್ದರೆ ಇದರಿಂದ ರೈತರಿಗೆ ನಾವು ಬಹಳ ದೊಡ್ಡ ಹಾನಿಯನ್ನು ಮಾಡಿ, ಇಂಡಸ್ಟ್ರಿಯಲ್ ಜನರಿಗೆ ನಾವು ಅವಕಾಶವನ್ನು ಮಾಡಿ ಕೊಟ್ಟಂತಾಗುತ್ತದೆ. ಈ ಕಾನೂನನ್ನು ತರುವಾಗ ಸ್ವಲ್ಪ ಸ್ಥೂಲವಾಗಿ ವಿಚಾರ ಮಾಡುವುದು ಅವಶ್ಯಕವಾಗಿರುತ್ತದೆ. ಇಡೀ ರಾಜ್ಯದ ಹಿತದೃಷ್ಟಿಯಿಂದ ಮತ್ತು ರೈತರ ಹಿತದೃಷ್ಟಿಯಿಂದ, ಮತ್ತು ಇಲ್ಲಿ ಉದ್ಯಮಗಳು ಬರಬೇಕು, ಇಲ್ಲಿ ಉದ್ಯಮಗಳು ಬರಬೇಕಾದರೆ, ಎಷ್ಟು ಜಮೀನು ಕೊಡಬೇಕು, ಇಲ್ಲಿ ಎಷ್ಟು ದೊಡ್ಡ ಉದ್ದಿಮೆ ಬರುತ್ತದೆ, ಇದರಿಂದ ಎಷ್ಟು ಜನರಿಗೆ ಉದ್ಯೋಗಾವಕಾಶ ಸಿಗುತ್ತದೆ, ಇದೆಲ್ಲವನ್ನು ಗಣನೆಗೆ ತೆಗೆದುಕೊಂಡು ಈ ಒಂದು ಕಾನೂನನ್ನು ತರುವುದು ಸೂಕ್ತವೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳತಕ್ಕಂಥದ್ದೇನೆಂದರೆ, ಕೆಐಎಡಿಬಿ ಆ್ಯಕ್ಟ್‌ನಲ್ಲಿ ರಿಸಮ್‌ಷನ್ ಕ್ಲಾಸ್ ಇಲ್ಲ. ನಾವು ರಿಸಮ್‌ಷನ್ ಮಾಡಿಕೊಂಡು ಬೇರೆಯವರಿಗೆ ಅಲಾಟ್ ಮಾಡತಕ್ಕಂಥಾದ್ದು ಆಗುವುದಿಲ್ಲ. ಅದಕ್ಕಾಗಿ ನಾವು ಈಗ ಸಧ್ಯಕ್ಕೆ Eviction of unauthorised public premises Act ಕೆಳಗಡೆ ಇವಿಕ್ಟ್ ಮಾಡುವುದಕ್ಕೆ ಹೋಗುತ್ತೇವೆ. ಯಾರು ಕಾನೂನನ್ನು ವೈಯೋಲೇಟ್ ಮಾಡಿದ್ದಾರೆ. ಹಾಗೆ ವೈಯೋಲೇಟ್ ಮಾಡಿದವರಿಗೆ ಇವಿಕ್ಟ್ ಮಾಡಬೇಕಾದರೆ Eviction of unauthorised public premises Act ಕೆಳಗಡೆ ಇದು ಬರುತ್ತದೆ ಇದರ ಪ್ರೊಸೀಜರ್ ಲೆಂಥಿ ಇದೆ. ಅದಕ್ಕಾಗಿ ಈ ಕೆಐಎಡಿಬಿ ಆ್ಯಕ್ಟ್‌ನಲ್ಲಿ ಸೆಕ್ಷನ್ 25 ರಲ್ಲಿ ಒಂದು ಸಣ್ಣ ತಿದ್ದು ಪಡಿಯನ್ನು ಮಾಡಿ ಯಾರು ಕಾನೂನನ್ನು ವೈಯೋಲೇಟ್ ಮಾಡುತ್ತಾರೆ ಅವರಿಂದ ಆ ಪ್ಲಾಟ್ಸನ್ನು ರಿಸ್ಯೂಂ ಮಾಡಿಕೊಂಡು ಮತ್ತೆ ರೀ-ಅಲಾಟ್‌ಮೆಂಟ್ ಮಾಡುವುದಕ್ಕೆ ತಾವು ಹೇಳಿದಂತೆ, ಯಾರಿಗೆ ಅವಶ್ಯಕತೆ ಇದೆ, ಅಥವಾ ಎಲ್ಲಿ ಬೇಕು, ಎಲ್ಲಿ ಇಂಡಸ್ಟ್ರಿಯಲ್ ಗೋಥ್ ಎಲ್ಲಿ ಇದೆ ಅವರಿಗೆ ಪುನಃ ಕೊಡಬೇಕೆನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಅದಕ್ಕಾಗಿಯೇ ಹಿಂದಿನ ಸರ್ಕಾರ ಇದನ್ನು ಕೂಲಂಕಷವಾಗಿ ಚರ್ಚೆ ಮಾಡಿ ಈ ಒಂದು ತಿದ್ದುಪಡಿಯನ್ನು ಅವರು ಇಟ್ಟಿದ್ದರು. ಅದನ್ನು ನಾವು ಇವತ್ತು ಇಂಟ್ರಡ್ಯೂಸ್ ಮಾಡಿರುತ್ತೇವೆ. ಇದು ಉಪಯುಕ್ತವಾದಂಥಾದ್ದು ಇದೆ, ಅದಕ್ಕಾಗಿ ತಾವು ಎಲ್ಲರೂ ದಯಮಾಡಿ ಒಮ್ಮತದಿಂದ ಇದನ್ನು ಒಪ್ಪಬೇಕೆಂದು ನಾನು ಕೇಳುತ್ತೇನೆ. ಇದಕ್ಕೆ ಮಾನ್ಯ ಬಿ.ಎನ್. ಬಚ್ಚೇಗೌಡರು ಹಾಗೂ ಮಾನ್ಯ ಭೈರೇಗೌಡರು ಹೇಳಿದಂತೆ, ರೈತರಿಗೆ ಹೆಚ್ಚಿಗೆ ಕಾಂಪೆನ್‌ಸೇಷನ್ ಕೊಡತಕ್ಕಂಥಾದ್ದು ಕೂಡ ಆಗಬೇಕು. ಪ್ರಾಜೆಕ್ಟ್ ಏರಿಯಾದಲ್ಲಿಯೇ ಜಮೀನು ಇರಬಹುದು, ರಸ್ತೆಗಾಗಿ ನಾವು ಸ್ವಾಧೀನಪಡಿಸಿಕೊಳ್ಳತಕ್ಕಂಥ ಜಮೀನು ಇರಬಹುದು, ಬಿಡಿಎನಲ್ಲಿ ಇರಬಹುದು, ಕೆಯುಡಿಎನಲ್ಲಿ ಇರಬಹುದು, ಸಿಟಿ ಇಂಪ್ರೂವ್‌ಮೆಂಟ್‌ನಲ್ಲಿ ಇರಬಹುದು, ಇದಕ್ಕೆ ನಾವು ಒಂದು ವಿಶೇಷವಾದಂಥ ಕಾಯಿದೆಯನ್ನಾದರೂ ಮಾಡಬೇಕಾಗುತ್ತದೆ ಅಥವಾ ಒಂದು ನಿರ್ಣಯಕ್ಕಾದರೂ ಬರಬೇಕಾಗುತ್ತದೆ. ಅದು ಇದೊಂದಕ್ಕೆ ಬರುವುದಿಲ್ಲ. ಅದಕ್ಕಾಗಿ ನಾವು ಇದೊಂದಕ್ಕೆ ಏನಾದರೂ ಸ್ಪೇಷಲ್‌ಆಗಿ ಮಾಡುತ್ತೇವೆಂದರೆ, ಅದು ಇದರಲ್ಲಿ ಬರುವುದಿಲ್ಲ. ಅದಕ್ಕಾಗಿ ಇದನ್ನು ವಿಚಾರ ಮಾಡತಕ್ಕಂಥಾದ್ದು ಇದೆ. ಸೇಮ್‌ಟೈಮ್ ವ್ಯಾಲ್ಯೂ ಯಾವಾಗ ಬರುತ್ತದೆಂದರೆ, ಯಾವಾಗ ಏರಿಯಾ ಡೆವಲಪ್‌ಮೆಂಟ್ ಮಾಡುತ್ತೇವೆ. ಆಗ ಮಾತ್ರ ಇದು ಬರುತ್ತದೆ. ಅದರ ಪಕ್ಕದಲ್ಲಿಯೇ ಒಂದು ಅಗ್ರಿಕಲ್ಚರ್ ಲ್ಯಾಂಡ್ ಇದ್ದರೆ, ಅದು ಡೆವಲಪ್‌ಮೆಂಟ್ ಆಗಿರದಿದ್ದರೆ ಅದನ್ನು ಯಾರೂ ಕೇಳುವುದಿಲ್ಲ. ಬಂಜರು ಭೂಮಿ ಇರತಕ್ಕಂತಹ ನೂರು ಎಕರೆ ಜಮೀನನ್ನು ನೀವು ತೆಗೆದುಕೊಂಡು ರೋಡ್, ನೀರು, ರಸ್ತೆ, ಎಲೆಕ್ಟ್ರಿಸಿಟಿಯನ್ನು ತಂದಾಗ ಮಾತ್ರ ಆ ಜಮೀನಿಗೆ ಬೆಲೆ ಬರುತ್ತದೆ. ನಾವು ಇನ್‌ಫ್ರಾಸ್ಟ್ರಕ್ಚರನ್ನು ಒದಗಿಸಿಕೊಟ್ಟಾಗ ಮಾತ್ರ ಆ ಭೂಮಿಗೆ ಬೆಲೆ ಬರುತ್ತದೆ, ಹಾಗೆ ಬೆಲೆ ಬಂದ ತಕ್ಷಣ ನಾವು ಎಲ್ಲವನ್ನೂ ರೈತರಿಗೆ ಕೊಡುತ್ತೇವೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ನಾವು ಅನೇಕ ಸಾರಿ ಬಡವರ ಒಂದು ಸೈಟ್‌ಗೋಸ್ಕರ ತೆಗೆದುಕೊಳ್ಳುತ್ತೇವೆ, ನಾಗರೀಕ ಸೌಲಭ್ಯಗಳನ್ನು ಕೊಡುವುದಕ್ಕೂ ತೆಗೆದುಕೊಳ್ಳುತ್ತೇವೆ. ಈ ಎರಡು ಪರಿಸ್ಥಿತಿಯನ್ನು ನಾವು ನೋಡುಬೇಕಾಗುತ್ತದೆ. ನಾಗರೀಕರ ರಕ್ಷಣೆ

ಹಾಗೂ ರೈತರಿಗೆ ಹೆಚ್ಚಿನ ಕಾಂಪನ್‌ಸೇಷನ್ ಸಿಗಬೇಕು ಎನ್ನುವಂಥಾದ್ದನ್ನು ಸಹ ನೋಡಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಸದಸ್ಯರುಗಳು ಒಳ್ಳೆಯ ಸಲಹೆಗಳನ್ನು ನಮಗೆ ಕೊಟ್ಟಿದ್ದಾರೆ, ಸರ್ಕಾರ ಅದನ್ನು ಪರಿಶೀಲಿಸುತ್ತದೆ. ಅದಕ್ಕಾಗಿ ದಯವಿಟ್ಟು ಈ ತಿದ್ದುಪಡಿಯನ್ನು ಅಂಗೀಕಾರ ಮಾಡಬೇಕು ಎಂದು ಹೇಳಿ ಅವರಿಗೆ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೆ, ಅನೇಕ ಜನ ರೈತರ ಜಮೀನನ್ನು ಅಕ್ವೈರ್ ಮಾಡಿಕೊಂಡು ಇಂಡಸ್ಟ್ರಿಯಲ್ ಪರ್‌ಪಸ್‌ಗೆ ಕೊಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಇಂಡಸ್ಟ್ರಿಗಳು ಬರುತ್ತವೆ ಈ ಜಮೀನನ್ನು ಕಳೆದುಕೊಂಡಂಥ ಜನರು, ಜಮೀನು ಯಾವಾಗ ಹೋಗುತ್ತದೆ. ಆಗ ಅಲ್ಲಿ ವ್ಯವಸಾಯ ಮಾಡತಕ್ಕಂಥಾದು ತಪ್ಪುತ್ತದೆ. ಅವರಿಗೆ ವ್ಯವಸಾಯ ಮಾಡುವುದಕ್ಕೆ ಜಮೀನು ಇರುವುದಿಲ್ಲ, ಬೇರೆ ಉದ್ಯೋಗ ಸಿಗುವುದು ಬಹಳ ಕಷ್ಟವಾಗುತ್ತದೆ. ಆ ಇಂಡಸ್ಟ್ರಿಯಲ್‌ದಲ್ಲಿ ಜಮೀನು ಕಳೆದುಕೊಂಡವರಿಗೆ ಅವರ ವಿದ್ಯೆಯ ಅರ್ಹತೆಯ ಅಧಾರದ ಮೇಲೆ ಕೆಲಸವನ್ನು ಕೊಡುವಂಥಾದ್ದರ ಬಗ್ಗೆ ಆ ಒಂದು ಸಲಹೆಯನ್ನು ಇನ್‌ಸರ್ಟ್ ಮಾಡಿದರೆ ಉತ್ತಮವೆಂದು ನನ್ನ ಸಲಹೆಯಾಗಿದೆ, ಅದನ್ನು ಸರ್ಕಾರ ಪರಿಶೀಲನೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇದು ಕೆಐಎಡಿಬಿ ಆ್ಯಕ್ಟ್‌ನಲ್ಲಿ ಇಲ್ಲ, ಇದು ರಿಸೆಪ್‌ಷನ್ ಕ್ಲಾಸ್ ಮಾತ್ರ ಇರುತ್ತದೆ. ಇಂಡಸ್ಟ್ರಿಯಲ್‌ದಲ್ಲಿ ಯಾರ ಜಮೀನು ಹೋಗಿದೆ, ಅವರಿಗೆ ಪ್ರಾಜೆಕ್ಟ್ ಪ್ರಾಯಾರಿಟಿ ಮೇಲೆ ಕೊಡಬಹುದು. ಇದು ರೈತರಿಗೆ ಬರುವುದಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ : ಬಡವರ ಮಕ್ಕಳನ್ನು ಯಾರು ಕೇಳುತ್ತಾರೆ. ರೈತರಿಗೆ ಇದ್ದ ಜಮೀನು ಹೋಯಿತು, ಅವರ ವ್ಯವಸಾಯ ಹೋಯಿತು. ಅವರಿಗೆ ಕೆಲಸ ಇರುವುದಿಲ್ಲ, ಅವರಿಗೆ ಜವಾನನ ಕೆಲಸವನ್ನಾದರೂ ಕೊಡಿ, ಅವನು ಎಸ್‌ಎಸ್‌ಎಲ್‌ಸಿ ಪಾಸ್ ಮಾಡಿದ್ದರೆ ಕ್ಲರ್ಕ್ ಪೋಸ್ಟ್ ಕೊಡಿ. ಬಿಎ ಪಾಸು ಮಾಡಿಕೊಂಡಿದ್ದರೆ ಪ್ರಥಮ ದರ್ಜೆ ಸಹಾಯಕ ಹುದ್ದೆಯನ್ನು ಕೊಡಿ. ಇದನ್ನು ನೀವು ಕಂಪಲ್‌ಸರಿ ಮಾಡದೇ ಹೋದರೆ ಆ ಹುದ್ದೆಗಳು ರಾಜಕಾರಣಿಗಳ ಹಾಗೂ ದೊಡ್ಡ ದೊಡ್ಡ ಜನರ ಪಾಲಾಗಿ ಹೋಗುತ್ತವೆ. ಆ ಬಡವರ ಮಕ್ಕಳಿಗೆ ಏನೂ ಸಿಗುವುದಿಲ್ಲ. ದಯಾಮಾಡಿ ಇದ್ಕೊಂದನ್ನು ಇನ್‌ಸರ್ಟ್ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸದಸ್ಯರುಗಳು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ, ಇದನ್ನು ಗಮನದಲ್ಲಿಡತಕ್ಕಂಥ ಅವಶ್ಯಕತೆ ಇರುತ್ತದೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರಲ್ಲಿ ಒಂದು ವಿನಂತಿಯನ್ನು ಮಾಡುತ್ತೇನೆ. ದಾಬಾಸ್‌ಪೇಟೆಯಲ್ಲಿ ಸುಮಾರು ಎರಡು ಸಾವಿರ ಎಕರೆ ಜಮೀನನ್ನು ತೆಗೆದುಕೊಂಡರು. ಆ ಜಮೀನು ಕಳೆದುಕೊಂಡಂತ ರೈತರ ಮಕ್ಕಳಿಗೆ ಅಪಾಯಿಂಟ್‌ಮೆಂಟ್ ಕೊಡಿ ಎಂದು ಕೇಳಿಕೊಂಡಾಗ ಅವರು ಒಪ್ಪಿಕೊಂಡರು. ಕೋರ್ಟ್‌ನಲ್ಲಿ ಹಾಕಿರುವ ಕೇಸನ್ನು ವಾಪಸ್ಸು ತೆಗೆದುಕೊಂಡಾಗ ಬಿಪಿಎಲ್‌ದವರು ಕೇರಳದವರನ್ನು ಹಾಗೂ ಮದ್ರಾಸ್ ಹಾಗೂ ಆಂಧ್ರದವರನ್ನು ಕೆಲಸಕ್ಕೆ ತೆಗೆದುಕೊಂಡರು. ದಯಮಾಡಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ಪರಾಮರ್ಶಿಸಬೇಕು.

ರೈತರ ಜಮೀನನ್ನು ಆಕ್ವೈರ್ ಮಾಡಿಕೊಂಡಿರುತ್ತೀರಿ, ಆ ರೈತರ ಮಕ್ಕಳಿಗೆ ಅಪಾಯಿಂಟ್‌ಮೆಂಟ್ ಕೊಡುವಂತಹ ಒಂದು ವ್ಯವಸ್ಥೆಯಾಗುವ ಸಲುವಾಗಿ ಒಂದು ಕ್ಲಾಜನ್ನು ಇದರಲ್ಲಿ ಸೇರಿಸಿ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಸಚಿವರು ಕತ್ತುಹಾಕಿದರೆ ಆಗುವುದಿಲ್ಲ. ಅದರಲ್ಲಿ ಆ ಒಂದು ಕ್ಲಾಜನ್ನು ಹಾಕಿದರೆ ಅದರಿಂದ ರೈತರಿಗೆ ಒಳ್ಳೆಯದಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಎರಡು ವಿಚಾರಗಳ ಬಗ್ಗೆ ವಿವರಣೆಯನ್ನು ಕೊಡಬೇಕಾಗುತ್ತೆದೆ. ಮಾನ್ಯ ಹನುಮೇಗೌಡರು ಹಾಗೂ ಮಾನ್ಯ ಭೈರೇಗೌಡರು ಏನು ಹೇಳಿದ್ದಾರೆ ಎಂದರೆ ಯಾರು ಜಮೀನು ಕಳೆದುಕೊಳ್ಳುತ್ತಾರೆ, ಅಂತಹ ರೈತರ ಮಕ್ಕಳಿಗೆ ಒಂದು ಉದ್ಯೋಗವನ್ನು ಕೊಡತಕ್ಕಂಥಾದ್ದು ಒಳ್ಳೆಯದು ಎಂದು ಹೇಳಿದ್ದಾರೆ ಅದಕ್ಕೆ ಒಂದು ಪ್ರತ್ಯೇಕವಾದಂಥ ಮಸೂದೆಯನ್ನು ತಂದು ವಿಚಾರ ಮಾಡಿ ತಿದ್ದುಪಡಿ ಮಾಡಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಆ ಬಗ್ಗೆ ಪರಿಶೀಲನೆ ಮಾಡತಕ್ಕಂಥ ಭರವಸೆಯನ್ನು ಕೊಟ್ಟಿದ್ದಾರೆ, ಅದು ಸರಿ. ಆದರ ಜೊತೆಗೆ 'ಸರೋಜಿನಿ ಮಹಿಷಿ' ವರದಿ ಏನಿದೆ, ಆ ವರದಿಯನ್ನು ಸಹ ಗಮನದಲ್ಲಿಟ್ಟುಕೊಂಡು ಅದರಲ್ಲಿ ಏನು ತಿದ್ದುಪಡಿ ಮಾಡಬೇಕೆಂಬುದನ್ನು ವಿಚಾರ ಮಾಡಬೇಕು ಎನ್ನುವುದು ಮಾನ್ಯ ಮಂತ್ರಿಗಳಿಗೆ ಮತ್ತು ಈ ಸರ್ಕಾರಕ್ಕೆ ನನ್ನ ಒಂದು ಸಲಹೆಯಾಗಿದೆ. ಇವರು ತಂದಿರತಕ್ಕಂಥ ತಿದ್ದುಪಡಿ ಏನಿದೆ, ಜನರಲ್ಲಾಗಿ ಇದರ ಬಗ್ಗೆ ನಾನು ಒಪ್ಪಿಕೊಳ್ಳುತ್ತೇನೆ. ಬಿಡಿಎದವರು ಎರಡು-ಮೂರು ವರ್ಷದ ಒಳಗಾಗಿ ಮನೆಯನ್ನು ಕಟ್ಟಿಕೊಳ್ಳಬೇಕೆಂದು ಕಾನೂನನ್ನು ಮಾಡುತ್ತಾರೆ, ಕಟ್ಟದಿದ್ದರೆ ನಂತರ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ. ಅವರು 5-6 ವರ್ಷದ ನಂತರ ಮನೆಕಟ್ಟಿಕೊಳ್ಳುತ್ತಾರೆ. ಕೆಲವೊಬ್ಬರು ಜನರಲ್ ಪವರ್ ಆಫ್ ಅಟಾರ್ನಿ ಕೊಟ್ಟು 10 ವರ್ಷದ ನಂತರ ಟ್ರಾನ್ಸ್‌ಫರ್ ಮಾಡಿದ್ದನ್ನು ನಾವು ನೋಡುತ್ತೇವೆ.

1.20 ಪಿ.ಎಂ.

ಏಕೆಂದರೆ ಕೆಐಎಡಿಬಿಯವರು ಅಲಾಟ್ ಮಾಡುವುದು ಇಂಡಸ್ಟ್ರಿಯಲ್‌ಗೆ ಮಾತ್ರ. ತಮಗೆ ಗೊತ್ತಿರುವಹಾಗೆ, ಯಾವುದೇ ಒಂದು ಇಂಡಸ್ಟ್ರಿಯನ್ನು ಕೂಡ ಪ್ರಾರಂಭವಾಗಬೇಕಾದರೆ ಅವರಿಗೆ ಮೊದಲನೆಯದಾಗಿ ರಾ-ಮೆಟೀರಿಯಲ್ಸ್ ಅವೈಲೆಬಿಲಿಟಿ, ಎರಡನೆಯದಾಗಿ ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್ ಆ ಎರಡು ವರ್ಷದೊಳಗೆ ಅವರಿಗೆ ಹಣವನ್ನು ಒದಗಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇವತ್ತು ನಮಗೆ ಗೊತ್ತಿದೆ, ಅದೆನ್ನೆಲ್ಲಾ ಒಂದುಗೂಡಿಸುವುದಕ್ಕೆ ಎರಡು ವರ್ಷದ ಸಮಯ ಸಾಕಾಗುತ್ತದೆಯೇ? ಇದು ಇಲ್ಲಿ ನಮ್ಮ ಮುಂದೆ ಇರತಕ್ಕಂತಹ ಪ್ರಶ್ನೆಯಾಗಿದೆ. ಇವತ್ತು ಪವರ್ ಕನೆಕ್ಷನ್‌ಗೆ ತೊಂದರೆ, ಹೈಪವರ್ ಬೇಕಾದರೆ ಸರ್ಕಾರದಿಂದ ಒದಗಿಸುವುದಕ್ಕೆ ಸಾಧ್ಯವೇ? ಇದೆಲ್ಲಾ ಇರುವಾಗ ಏನಾಗುತ್ತದೆಂದರೆ ಯಾರು ಒಬ್ಬ ಅಧಿಕಾರಿಯ ಕೈಗೆ ನಾವು ಅಧಿಕಾರವನ್ನು ಕೊಡುತ್ತೇವೆ, ಅವನು ಏನು ಮಾಡುತ್ತಾನೆಂದರೆ, ಹೇರಾಸ್ ಮಾಡಬೇಕೆನ್ನುವ ದೃಷ್ಟಿಯಿಂದ ಎರಡು ವರ್ಷ ಇರತಕ್ಕಂಥಾದ್ದನ್ನು ಇನ್ನೂಂದು ವರ್ಷ ಕೊಡಲಿಕ್ಕೆ ಇದರಿಂದ ದುರುಪಯೋಗವಾಗುವುದಕ್ಕೆ ಅವಕಾಶಗಳು ಇದೆ. ಮಾನ್ಯ ಮಂತ್ರಿಗಳು ಏನು ಒಪ್ಪಿಕೊಂಡಿದ್ದಾರೆ,

ಪ್ರತ್ಯೇಕವಾದಂತಹ ಒಂದು ಕಾನೂನನ್ನು ಇನ್ನು ಮುಂದೆ ಕೆಐಎಡಿಬಿ ಪರ್‌ಪಸ್‌ಗೆ ಅಥವಾ ಸರ್ಕಾರದ ಬೇರೆ ಪರ್‌ಪಸ್‌ಗೆ ಜಮೀನನ್ನು ತೆಗೆದುಕೊಂಡಂತಹ ಸಂದರ್ಭದಲ್ಲಿ ಅಲ್ಲಿ ಜಮೀನನ್ನು ಕಳೆದುಕೊಂಡಂತಹ ರೈತರ ಮಕ್ಕಳಿಗೆ ಉದ್ಯೋಗವನ್ನು ಕೊಡುವಂತಹ ಕಾನೂನನ್ನು ಹೊಸದಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ ನಾನು ಸರ್ಕಾರದ ಈ ಕ್ರಮವನ್ನು ಸ್ವಾಗತ ಮಾಡುತ್ತೇನೆ. ಇದನ್ನು ಆದಷ್ಟು ಬೇಗ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹೇಳಿದ್ದನ್ನು ನಮ್ಮ ಬಾಯಿಯಿಂದ ಹೇಳಿಸಬೇಡಿ, ನಾನು ಏನು ಹೇಳಿದ್ದೇನೆಂದರೆ, ಲ್ಯಾಂಡ್ ಅಕ್ವಿಜಿಷನ್ ಕಾಂಪೆನ್‌ಸೇಷನ್ ಬಗ್ಗೆ, ಇದಕ್ಕೆ ಸಾಕಷ್ಟು ಕಾಂಪೆನ್‌ಸೇಷನ್ಸನ್ನು ಕೊಡುತ್ತಿಲ್ಲ, ಮಾರ್ಕೆಟ್ ವ್ಯಾಲ್ಯೂ ಒಂದು ತರಹ ಇರುತ್ತದೆ. ಸಬ್-ರಿಜಿಸ್ಟ್ರಾರ್ ಕಛೇರಿಯಲ್ಲಿ ಒಂದು ತರಹದ ವ್ಯಾಲ್ಯೂ ಇರುತ್ತದೆ, ಆದ್ದರಿಂದ ರೈತರಿಗೆ ಸಿಗಬೇಕಾದ ರೀತಿಯಲ್ಲಿ. ಕಾಂಪೆನ್‌ಸೇಷನ್ ಸಿಗುತ್ತಿಲ್ಲ. ಬೇರೆಯವರು ಇದನ್ನು ಅಕ್ವೈರ್ ಮಾಡಿಕೊಂಡು ಕೋಟಿಗಟ್ಟಲೆ ಹಣವನ್ನು ಮಾಡಿಕೊಳ್ಳುತ್ತಾರೆ. ರೈತರಿಗೆ ಮಾತ್ರ ಸರಿಯಾದ ರೀತಿಯಲ್ಲಿ ಹಣ ಸಿಗುತ್ತಿಲ್ಲವೆನ್ನತಕ್ಕಂತಹ ಮಾತನ್ನು ಹೇಳಿದರು. ಇದು ಒಳ್ಳೆಯ ಸಲಹೆ, ಇದನ್ನು ನಾವು ಪರಿಶೀಲನೆ ಮಾಡತ್ತೇವೆಂದು ಹೇಳಿದ್ದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದನ್ನು ಪರಿಶೀಲನೆ ಮಾಡಿ, ಇದರ ಜೊತೆಗೆ ನಾನು ಹೇಳಿದ್ದನ್ನೂ ಕೂಡ ಪರಿಶೀಲನೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಯಾವ ಘನ ಉದ್ದೇಶದಿಂದ ಈ ತಿದ್ದುಪಡಿಯನ್ನು ಈ ಮೂದಲು ತಮ್ಮ ಸರ್ಕಾರವಿದ್ದ ಸಂದರ್ಭದಲ್ಲಿ ತಂದಿದ್ದಿರಿ ಆ ಉದ್ದೇಶದಿಂದಲೇ ಇವತ್ತು ನಾವು ಇದನ್ನು ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವು ಹೇಳಿದ್ದನ್ನು ನೀವು ಯಾವುದು ಮಾಡಿರುವುದಿಲ್ಲ. ಯಾವುದೋ ಒಂದು ಪೋರ್ಷನ್ ನೀವು ಎತ್ತಿಕೊಂಡು ಇದನ್ನು ನೀವು ಮಾಡಿದ್ದೀರಿ. ಅದಕ್ಕೋಸ್ಕರವಾಗಿ ಈ ಸಲಹೆಗಳನ್ನು ನಾವು ಮಾಡುತ್ತಿದ್ದೇವೆ, This is not the correct argument. We have given powers to Election Commission? Why are you withdrawing it? ಶ್ರೀಮಾನ್ ಬಿ.ಎನ್. ಬಚ್ಚೇಗೌಡರು ಹಾಗೂ ಶ್ರೀ ಹನುಮೇಗೌಡರು ಮತ್ತು ಭೈರೇಗೌಡರು ಏನು ಹೇಳಿದ್ದಾರೆಂದರೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮ ಆಕ್ಟ್‌ನ ಕೆಳಗಡೆ ತಾವು ಚುನಾವಣೆಯನ್ನು ಮಾಡಿರುತ್ತೀರಿ. ಇದರ ಬಗ್ಗೆ ನಿಮಗೆ ಅನುಭವ ಇರಲಿಲ್ಲ, ನಾವು ನಿಮ್ಮ ಆಕ್ಟ್‌ನ ಕೆಳಗಡೆ ತಿದ್ದುಪಡಿ ಮಾಡಿ ಚುನಾವಣೆಯನ್ನು ಮಾಡಿದೆವು. ಅದರ ತೊಂದರೆ ಏನು ಎನ್ನುವುದು ನಮಗೆ ಗೊತ್ತಿತ್ತು. ಅದಕ್ಕಾಗಿ ನಾವು ತಿದ್ದುಪಡಿಯನ್ನು ತಂದಿದ್ದೇವೆ;

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಚುನಾವಣೆ ಮಾಡಿ ಇವರಿಗೆ ತೊಂದರೆಯಾಗಿರುವುದರಿಂದ ಎಲೆಕ್ಷನ್ ಕಮೀಷನ್‌ಗೆ ಇರುವ ಅಧಿಕಾರವನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದಿರಿ. ತಾವು ಇದರ

ಬಗ್ಗೆ ಸಹಮತವನ್ನು ವ್ಯಕ್ತಪಡಿಸಿರುತ್ತೀರಿ, ಎಲ್ಲರೂ ಏನು ಸಲಹೆಗಳನ್ನು ಕೊಟ್ಟಿದ್ದಾರೆ ನೀವು ಅವುಗಳಿಲ್ಲವನ್ನು ಜಾರಿಗೆ ತೆಗೆದುಕೊಂಡು ಬರಬೇಕು. ಈ ಸಂದರ್ಭದಲ್ಲಿ ನಮ್ಮ ಒತ್ತಾಯ ಇದೆ, ಅದನ್ನು ನೀವು ಪರಿಶೀಲನೆ ಮಾಡಬೇಕು, ಇದು ಪರಿಶೀಲನೆಗೆ ಯೋಗ್ಯವಾಗಿರುತ್ತದೆ. ಅದಕ್ಕಿಂತ ಮುಖ್ಯವಾಗಿ ಇವತ್ತಿನ ಅಮೆಂಡ್‌ಮೆಂಟ್‌ಗೆ ನಾವು ಏನು ಸಜೆಸ್ಟ್ ಮಾಡುತ್ತಿದ್ದೇವೆಂದರೆ, ನಿಮ್ಮ ರೂಲ್ಸನ್ನು ಫ್ರೇಮ್ ಮಾಡತಕ್ಕಂತಹ ಸಂದರ್ಭದಲ್ಲಿ ಇದಕ್ಕೆ ಕೆಐಎಡಿಬಿ ಯವರಿಗೆ ನೀವು ರೂಲ್ಸ್ ಫ್ರೇಮ್ ಮಾಡುತ್ತೀರಿ. ತಾವು ಈ ಕಡೆಗೆ ಗಮನವನ್ನು ಕೊಟ್ಟು ಆಲಿಸಬೇಕು, ತಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ, ಟೊಯೋಟಾ ಕಂಪನಿಗೆ ಕೆಐಎಡಿಬಿಯವರು ಲ್ಯಾಂಡನ್ನು ಅಕ್ವೈರ್ ಮಾಡಿದರು. ಹಾಗೆ ಅಕ್ವೈರ್ ಮಾಡಿದಂತಹ ಆ ಸಂದರ್ಭದಲ್ಲಿ ನಾನು ಆ ಸಮಯದಲ್ಲಿ ಮಂತ್ರಿಮಂಡಲದಲ್ಲಿ ಒಬ್ಬ ಸಚಿವನಾಗಿದ್ದೆ. ಇವರು ಏನು ಮಾಡಿದರೆಂದರೆ, ಟೊಯೋಟಾ ಕಿರ್ಲೋಸ್ಕರ್‌ಗೆ ಕೆಐಎಡಿಬಿಯವರು ಅಕ್ವೈರ್ ಮಾಡಿ ಜಮೀನನ್ನು ಕೊಟ್ಟರು. ಆ ಜಮೀನನ್ನು ಕೊಟ್ಟಂತಹ ಸಂದರ್ಭದಲ್ಲಿ ಇವರು ಬೈಲಮಂಗಲದ ಕೆರೆಯನ್ನು ಕೊಡುವಾಗ ಪ್ರಭಾವಿ ಸದಸ್ಯರು ಶ್ರೀ ಸಿ.ಎಂ. ಲಿಂಗಪ್ಪನವರು ಆಗ ನಾನು ಕೂಡ ಜಿಲ್ಲಾ ಮಂತ್ರಿಯಾಗಿದ್ದೆ. ನಾನು ನೂರೆಂಟು ಸಲ ಆ ಕೆಐಎಡಿಬಿಯವರನ್ನು ಕರೆದು ಹೇಳಿದೆ. ನೀರು ನಿಂತುಕೊಳ್ಳತಕ್ಕಂತಹ ಅಚ್ಚುಕಟ್ಟು ಜಾಗದಲ್ಲಿ 12 ಎಕರೆ ಜಮೀನನ್ನು ಇವರು ಒತ್ತುವರಿ ಮಾಡಿಕೊಂಡರು; ಇಲ್ಲವೆಂದು ಬೇಕಾದರೆ ಅವರು ಹೇಳಲಿ. ಒತ್ತುವರಿ ಮಾಡಿಕೊಂಡಿರುವ ಜಾಗಕ್ಕೆ ಹಣವನ್ನು ಕೊಡಿ ಎಂದು ಹೇಳಿ ನಾವು ಆ ಚಾನಲ್‌ಗಳನ್ನು ರಿಪೇರಿ ಮಾಡಿಸಬೇಕೆಂದು ಹೇಳಿದರೆ ಆ ನೀರಾವರಿ ಕಾರ್ಯದರ್ಶಿ ಹಾಗೂ ಆ ಕೆಐಎಡಿಬಿ ಸದಸ್ಯರುಗಳು ಯಾರಿಗೆ ಹೇಳಿದರೂ ಅವರು ಕೇಳಲಿಲ್ಲ. ರೈತರ ಪರಿಸ್ಥಿತಿ ಇಂತಹ ಅಧೋಗತಿ ಅದರೆ 8 ರಿಂದ 10 ಎಕರೆ ಜಮೀನು ಬೈಲಮಂಗಲ ಕರೆಯಲ್ಲಿ ನೀರು ನಿಂತುಕೊಳ್ಳುವ ಜಾಗಕ್ಕೆ ಈಗ ಅದಕ್ಕೆ ಅವಕಾಶವಿಲ್ಲ. ಇದು ನಮ್ಮ ಸರ್ಕಾರದಲ್ಲಿ ನಡೆದಿರುವಂತಹ ವಿಚಾರ, ಇವತ್ತಿಗೂ ಸಹ ನಾನು ಕಳೆದ 3 ವರ್ಷದಿಂದ ಇದನ್ನು ಪರಿಶೀಲನೆ ಮಾಡುತ್ತಿದ್ದೇನೆ. ಮಾನ್ಯ ಸಿ.ಎಂ. ಲಿಂಗಪ್ಪನವರು ಮತ್ತು ನಾನು ಈ ಪ್ರಯತ್ನವನ್ನು ಮುಂದುವರಿಸುತ್ತಿದ್ದೇವೆ; ಅದು ಇದುವರೆಗೂ ಸಹ ಆಗಿಲ್ಲ. ಇಂತಹ ಕೆಐಎಡಿಬಿಗೆ ಕಚ್ಚಲಿಕ್ಕೆ ಅವಕಾಶವನ್ನು ಕೊಟ್ಟರೆ ಇನ್ನು ಅವರು ಎಷ್ಟು ಜನಕ್ಕೆ ಕಚ್ಚುತ್ತಾರೆ; ಇದು ಬಹಳ ಮುಖ್ಯವಾಗಿರತಕ್ಕಂತಹ ವಿಚಾರವಾಗಿದೆ. ಈಗ ನಾವು ಇರತಕ್ಕಂತಹ ಕಾನೂನುಗಳನ್ನು ಜಾರಿಗೆ ಮಾಡುವುದಿಲ್ಲ, ಅಧಿಕಾರಿಗಳು ಏನಾದರೊಂದು ಮೀಟಿಂಗನ್ನು ಮಾಡಿದರೆ, ಏನು ಆಗಬೇಕೆಂದು ಹೇಳಿದ ತಕ್ಷಣವೇ ಅವರು ಲಾ ಅಮೆಂಡ್‌ಮೆಂಟ್ ಮಾಡಿ ಎಂದು ಹೇಳುತ್ತಾರೆ; ಮತ್ತೊಂದು ಟಾಸ್ಕ್ ಫೋರ್ಸ್ ಮಾಡಿ ಎಂದು ಹೇಳುತ್ತಾರೆ. ನಮ್ಮ ಕಾಲದಲ್ಲಿ ಕಮಿಟಿಯನ್ನು ಮಾಡಿ ಎಂದು ಹೇಳುತ್ತಿದ್ದವರು ನಿಮ್ಮ ಕಾಲದಲ್ಲಿ ಎಲ್ಲದಕ್ಕೂ ಟಾಸ್ಕ್ ಫೋರ್ಸ್ ಮಾಡಿ ಎಂದು ಹೇಳುತ್ತಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಯಾವತ್ತೂ ಇಂಡಸ್ಟ್ರೀಸ್‌ಗಳ ಜೊತೆ ಸಂಬಂಧವನ್ನು ಇಟ್ಟುಕೊಂಡಿಲ್ಲ, ಅವರಿಗೆ ಯಾವ ಇಂಡಸ್ಟ್ರೀಸ್‌ಗಳ ಬಗ್ಗೆ ಗೊತ್ತು ಸಹ ಇಲ್ಲ. ಟೊಯೋಟೋ, ಬಿಪಿಎಲ್ ಎಂದರೆ ಎಂದು ಯಾರು ಎಂದು ಗೊತ್ತಿಲ್ಲ. ಅವುಗಳೆಲ್ಲ ನಮ್ಮ ಮಾನ್ಯ ದೇಶಪಾಂಡೆಯವರಿಗೆ ಮಾತ್ರ ಗೊತ್ತಿರುವುದು. ನಮ್ಮ ಕಡೆ ಅವರು ಇದ್ದಾಗಲೂ

ಕೂಡ ಅವರಿಗೆ ವೈಭವೀಕರಣ, ಈಗ ಆ ಕಡೆ ಬಂದಾಗಲೂ ಸಹ ಅವರಿಗೆ ವೈಭವೀಕರಣ ಇದೆ; ಏನು ಮಾಡುವುದು ಇದು ದುರಾದೃಷ್ಟ. ನಮ್ಮ ವ್ಯವಸ್ಥೆ ಇದಕ್ಕೆ ಏನು ಮಾಡುವುದಕ್ಕಾಗುವುದಿಲ್ಲ, ಶ್ರೀಮತಿ ನಾಗರತ್ನಮ್ಮನವರನ್ನು ತೆಗೆದುಕೊಂಡು ಹೋಗಿ ಪ್ಲಾನಿಂಗ್ ಸ್ಟ್ಯಾಟಿಸ್ಟಿಕ್ಸ್, ವಿರೋಧಪಕ್ಷದ ನಾಯಕರಾಗಿದ್ದರು. ಅವರಿಗೆ ಆ ಖಾತೆಯನ್ನು ಕೊಟ್ಟು ಬಿಟ್ಟಿದ್ದರು. ಆದರೆ ಕೆಲವರು ಅದೇ ರೀತಿ ಇರುತ್ತಾರೆ ಅದನ್ನೇನು ಮಾಡುವುದಕ್ಕಾಗುವುದಿಲ್ಲ. ಮಾನ್ಯ ಖರ್ಗೆಯವರಿಗೆ ಆದಕ್ಕೋಸ್ಕರ ಅಪಾದನೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ, ನಾನು ಮಂತ್ರಿಯಾಗಿದ್ದಾಗ ಇರುವ ಅನುಭವವನ್ನು ಹೇಳುತ್ತಿದ್ದೇನೆ. ಆದ್ದರಿಂದ ಅವರು ಮಾಡುತ್ತಿದ್ದಾರೆ ಮಾಡಲಿ. ನಾನು ಕೇಳುತ್ತಿರುವುದು, ರೂಲ್ಸನ್ನು ಫ್ರೇಮ್ ಮಾಡುವಂತಹ ಸಂದರ್ಭದಲ್ಲಿ you please give a solemn assurance to this House. ಈ ಸದನಕ್ಕೆ ತಾವು ಹೇಳಬೇಕು ಇದನ್ನು ದುರುಪಯೋಗವನ್ನು ಮಾಡುವುದಿಲ್ಲ. ಕೆಐಎಡಿಬಿಯಿಂದ ದುರುಪಯೋಗವನ್ನು ಮಾಡದ ರೀತಿಯಲ್ಲಿ ನೀವು ಬೆದರಿಸಬಹುದು. ಯಾವನೋ ಒಬ್ಬ ಎರಡು ವರ್ಷ ಇಟ್ಟುಕೊಂಡಿರುತ್ತಾನೆ ಅವನು ಕೆಐಎಬಿಡಿಗೆ ಅಥವಾ ಐಡಿಬಿಐಗೆ ಅಥವಾ ನ್ಯಾಷನಲೈಸ್ಡ್ ಬ್ಯಾಂಕಿಗೆ, ಕೆನರಾ ಬ್ಯಾಂಕಿಗೆ ಸಾಲ ಕೊಡಿ ಎಂದು ಅಪ್ರೋಚ್ ಮಾಡಿರುತ್ತಾನೆ. ಅವರು for their own reasons which are unknown to the industrialists, ಅಲ್ಲಿ ತಡವಾಗಬಹುದು. ರಾ-ಮೆಟೀರಿಯಲ್ಸ್ ಬರುವುದು, ಅದನ್ನು ನಾವು ಈಗ ಲೆಬರಲೈಸ್ಡ್ ಮಾಡಿಬಿಟ್ಟಿದ್ದೇವೆ. ಇಂಟರ್‌ನ್ಯಾಷನಲ್ ಮಾರ್ಕೆಟ್‌ನಲ್ಲಿ fluctuation ಏನಾಗುತ್ತದೆ ಗೊತ್ತಾಗುವುದಿಲ್ಲ. ರಾ-ಮೆಟೀರಿಯಲ್ಸ್ ಬರುವುದು ಡಿಲೇ ಆಯಿತು. 24 ತಿಂಗಳು ಕಾಯ್ದುಕೊಂಡು ನಂತರ ಅವನಿಗೆ ನೋಟೀಸ್ ಕೊಟ್ಟು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಬ್ಲಾಕ್‌ಮೇಲ್ ಮಾಡುವುದಕ್ಕೆ ಹೊರಟರೆ ಹೇಗಾಗುತ್ತದೆ? ಅದರಿಂದ ಸೈಟ್ ಮತ್ತು ಮನೆಗಳ ವಿಚಾರದಲ್ಲಿ ನಾನು ಅರ್ಥಮಾಡಿಕೊಳ್ಳಬಹುದು; ಆದರೆ ಈ ವಿಚಾರದಲ್ಲಿ ಸರ್ಕಾರ ಕೆಐಎಡಿಬಿಗೆ ಈ ಎಲ್ಲಾ ಅಸ್ತ್ರಗಳನ್ನು ಕೊಡುವಂತಹ ಸಂದರ್ಭದಲ್ಲಿ ಇನ್ಸ್‌ಪೆಕ್ಟರೇಟ್ ರಾಜ್ ಎಂದು ಏನಿದೆ ಅದಕ್ಕೆ ಅವರೇ ಮಂತ್ರಿಗಳಾಗಿರಲಿ, ನಾವೇ ಮಂತ್ರಿಗಳಾಗಿರಲಿ, ಅವರು ಅಡಳಿತ ನಡೆಸುವಂತಹ ಸಂದರ್ಭದಲ್ಲಿ ಅವರೇ ತಮ್ಮದಾದ ಒಂದು ಭ್ರಮಾ ಲೋಕದಲ್ಲಿರುತ್ತಾರೆ. ಅದನ್ನು ತಪ್ಪಿಸಲಿಕ್ಕೆ ಕಡಿಮೆ ರೀತಿಯಲ್ಲಿ ಕಾನೂನುಗಳನ್ನು ಮಾಡತಕ್ಕಂಥಾದ್ದು ಸೂಕ್ತವೆಂದು ನನ್ನ ಅಭಿಪ್ರಾಯವಾಗಿದೆ. ಅದನ್ನು ಸರ್ಕಾರದವರು ಮಾಡುತ್ತಾರೆ, ಅದಕ್ಕಾಗಿ ನಾವು ಇದನ್ನು ವಿರೋಧ ಮಾಡುತ್ತಿಲ್ಲ. ಇದನ್ನು ವಿರೋಧ ಮಾಡುವುದಿಲ್ಲವೆಂದು ನಮ್ಮ ಅಧ್ಯಕ್ಷರು ಈಗಾಗಲೇ ಹೇಳಿದ್ದಾರೆ, ಅದಕ್ಕಾಗಿ ತಾವು ಇದು ದುರುಪಯೋಗವಾಗದ ರೀತಿಯಲ್ಲಿ ಏನಾದರೂ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಒಂದು ಯೊರ್ಡ್‌ಸ್ಟಿಕ್ಕನ್ನು ಇಟ್ಟುಕೊಳ್ಳಬೇಕೆಂದು ನಾವು ಒತ್ತಾಯವನ್ನು ಮಾಡುತ್ತೇವೆ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ : ಸ್ವಲ್ಪ ಟೈಮ್‌ಲಿಮಿಟನ್ನು ಜಾಸ್ತಿ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆಯಿತು. ಅದನ್ನು ರೂಲ್ಸ್ ಮಾಡುವಾಗ ಕನ್ಸಿಡರ್ ಮಾಡೋಣ.

ಶ್ರೀ ಸಿ. ಭೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ಇದರ ಜೊತೆಗೆ ಈಗಿರುವ ಡೆಫನೇಷನ್‌ನಲ್ಲಿ ಇಂಡಿಸ್ಟ್ರಿ ಸ್ಟಾರ್ಟ್ ಮಾಡಿದ್ದೇವೆ ಎನ್ನುವುದಕ್ಕೆ ಇವರು ಏನು ಮಾಡಿದ್ದಾರೆಂದರೆ, ಇವರು ಎಷ್ಟು ಉಪಾಯ ಮಾಡುತ್ತಾರೆಂದರೆ ಷೆಡ್ಡನ್ನು ತೆಗೆದುಕೊಳ್ಳುತ್ತಾರೆ ಒಂದು ವಾಚ್‌ಮನ್ ಕ್ವಾರ್ಟರ್ಸ್ ಕಟ್ಟಿಬಿಡುತ್ತಾರೆ; ವಾಚ್‌ಮನ್ ಕ್ವಾರ್ಟರ್ಸ್ ಕಟ್ಟಿಬಿಟ್ಟು ಅಲ್ಲಿ ಒಬ್ಬ ವಾಚ್‌ಮನ್‌ನನ್ನು ಇಟ್ಟುಬಿಡುತ್ತಾರೆ. ಆಗ ಇಲ್ಲಿ ಇಂಡಸ್ಟ್ರಿ ಕಮೆನ್ಸ್ ಆಗಿದೆ, ನಾವು ಪ್ರಾರಂಭ ಮಾಡಿದ್ದೇವೆ ಎಂದು ರಿಪೋರ್ಟನ್ನು ಕಳುಹಿಸಿಬಿಡುತ್ತಾರೆ. ಕೆಐಎಡಿಬಿಯವರು ಅವರ ಹತ್ತಿರವೇ ಹೋಗುವುದಿಲ್ಲ. ಇದು ನೂರಾರು ಕೇಸುಗಳಲ್ಲಿ ಅಲ್ಲ, ಸಾವಿರಾರು ಕೇಸುಗಳು ಇಂತಹವು ಇವೆ. ವಾಚ್‌ಮನ್ ಸಲುವಾಗಿ ಕಟ್ಟಿಸಿರುವ ಷೆಡ್ ನೋಡಿ ಅದನ್ನು ಇಂಡಸ್ಟ್ರಿ ಎಂದು ಪರಿಗಣನೆಗೆ ತೆಗೆದು ಕೊಳ್ಳುವುದಕ್ಕೆ ಹೋಗಬೇಡಿ. ಆಗಲೀ ಇದನ್ನು ಹೇಳಬೇಕಾದದ್ದನ್ನು ನಾನು ಮರೆತಿದ್ದೆ, ಸ್ಪೆಕಿಲೇಟಿವ್ ಪರ್‌ಪಸ್‌ಗೆ ಈ ಜಮೀನನ್ನು ಉಪಯೋಗಿಸುತ್ತಾರೆ. ಆ ಸ್ಪೆಕಿಲೇಟಿವ್ ಪರ್‌ಪಸ್‌ಗೆ ಉಪಯೋಗಿಸುವುದರಲ್ಲಿ ಒಳವ್ಯವಹಾರಗಳು ಆಗುತ್ತವೆ. ವಾಚ್‌ಮನ್ ಸಲುವಾಗಿ ಕಟ್ಟಿದ ಒಂದು ಷೆಡ್ ಇಂಡಸ್ಟ್ರಿ ಆಗುವುದಕ್ಕೆ ಸಾಧ್ಯವಿಲ್ಲ. ಈ ತರಹ ನೂರಾರು, ಸಾವಿರಾರು ಕೇಸುಗಳು ಇದೆ, ಅದರ ಬಗ್ಗೆ ತಾವು ತೆಗೆಸುವ ಕ್ರಮವನ್ನು ತೆಗೆದುಕೊಳ್ಳಿ, ಕಣ್ಣಿಗೆ ಮಣ್ಣೆರೆಚುವಂತಹ ಪ್ರಯತ್ನ ಏನು ನಡೆದಿದೆ, ಅವರನ್ನು ಹೊರಗಡೆ ಕಳುಹಿಸುವಂತಹ ಕೆಲಸವನ್ನು ದಯವಿಟ್ಟು ಮಾಡಬೇಕೆಂದು ಹೇಳಿ ತಮ್ಮ ಮೂಲಕ ನಾನು ಸರ್ಕಾರಕ್ಕೆ ಸಲಹೆಯನ್ನು ಮಾಡುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಿಂಧ್ಯಾರವರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದು ಉತ್ತಮವಾದಂತಹ ಸಲಹೆಯಾಗಿದೆ. ಅನೇಕ ಸಲ ಫೈನಾನ್ಸಿಯಲ್ ಇನ್ಸ್‌ಟಿಟ್ಯೂಷನ್, ರಾ-ಮೆಟೀರಿಯಲ್ಸ್ ಇದರ ಜೊತೆಗೆ ಬೇರೆ ಬೇರೆ ಏಜನ್ಸಿಗಳು ತಡವಾಗಿ ತಮ್ಮ ಕನ್ಸೆಂಟ್ ಕೊಡುವುದನ್ನಾಗಲೀ ಅಥವಾ ಅದಕ್ಕೆ ಮಾನ್ಯತೆಯನ್ನು ಕೊಡುವಂಥದ್ದಾಗಲೀ ಆಗುತ್ತದೆ. ಅದಕ್ಕೆ ರೂಲ್ಸ್‌ನಲ್ಲಿ ಯಾವ ರೀತಿಯಾಗಿ ತೆಗೆದುಕೊಳ್ಳುವಾಗ ಅದನ್ನು ಕೊಡುವಾಗ ಸ್ವಲ್ಪ ಎಕ್ಸ್‌ಟೆನ್‌ಷನ್ ಕೊಡುವುದಾಗಲಿ, ಆ ಒಂದು ಮಾಹಿತಿಯ ಆಧಾರದ ಮೇಲೆ ಬೋರ್ಡಿಗೆ ಅದರ ಬಗ್ಗೆ ಡಿಸ್‌ಕ್ರಿಶನರಿ ಪವರ್ ಕೂಡ ಇದೆ. ಸಬ್ ಕ್ಲಾಜ್-3 ಏನು ಇದೆ 34(ಬಿ)

"(3) After considering the cause, if any, shown by the allottee and after giving him an opportunity of being heard, the board may pass such orders, as it deems fit." ಎಂದು ಅದು ಕೂಡ ಇದೆ. ರೂಲ್ಸ್‌ನಲ್ಲಿ ಇರತಕ್ಕಂತಹ ಕೆಲವೊಂದು ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳುವುದನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಿ, ಅವರು ಕೊಟ್ಟಂತಹ ಎಲ್ಲ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಯಾವುದು ಸಾಧ್ಯವಿದೆ ಅದನ್ನು ಮಾಡುತ್ತೇವೆ. ಸೆಕ್ಷನ್ 34(ಬಿ)ನಲ್ಲಿ ಈಗಾಗಲೇ ಸ್ಪಷ್ಟವಾಗಿ ಹೇಳಲಾಗಿದೆ, ಸೆಕ್ಷನ್ 25ರಲ್ಲಿ ಇಂಡಸ್ಟ್ರಿ ಯಾವ ರೀತಿಯಾಗಿ ಬರಬೇಕು ಎನ್ನತಕ್ಕಂಥಾದ್ದನ್ನು ನಾವು ಸ್ಪಷ್ಟವಾಗಿ ಮಾಡಿದ್ದೇವೆ. ಒಂದು ವೇಳೆ ಅದನ್ನು ವೆಯೋಲೇಟ್ ಮಾಡಿದರೆ ಖಂಡಿತವಾಗಿ ನಾವು ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಚರ್ಚೆ ಮುಗಿಯಿತು. ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ 2000 ಇದನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 3ರವರಿಗೆ

ಅಧ್ಯಕ್ಷರು : ಖಂಡ 2 ರಿಂದ 3 ರವರಿಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾಪನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ, 2000 ಇದನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ, 2000 ಇದನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.